ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ

ವಾರ್ತಾಪತ್ರ

(ತ್ರೈಮಾಸಿಕ ಪತ್ರಿಕೆ)

ಸಂಪುಟ : ೦೩
ಸಂಚಿಕೆ : ೦೪ ೯

(ಖಾಸಗಿ ಪ್ರಸಾರಕ್ಕಾಗಿ ಮಾತ್ರ)

ಜನವರಿ – ಮಾರ್ಚ್ ೨೦೦೯

ಸಂಪಾದಕರು
ಎಸ್.ವಿ. ಶ್ರೀನಿವಾಸರಾವ್


ಪರಿವಿಡಿ

ವಿಳಾಸ
ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ. ಕಲಾಭವನ,
೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ
ಬೆಂಗಳೂರು – ೧೯
ದೂರವಾಣಿ : ೨೬೬೧೫೮೭೭

ಶಾಖೆ
ಬಿ.ಎಂ.ಶ್ರೀ. ಶತಮಾನೋತ್ಸವ ಭವನ
ಬೆಳ್ಳೂರು, ನಾಗಮಂಗಲ ತಾ॥, ಮಂಡ್ಯ ಜಿಲ್ಲೆ



ಎಂ.ವಿ.ಸೀ. ಶತಮಾನೋತ್ಸವ ಆಚರಣೆ



ಮನವಿ

ಪ್ರೊ॥ ಎಂ.ವಿ. ಸೀತಾರಾಮಯ್ಯನವರ ಜನ್ಮದಿನ ದಿನಾಂಕ: ೦೯-೦೯-೨೦೦೯ಕ್ಕೆ ನೂರನೇ ವರ್ಷಕ್ಕೆ ಅಡಿಯಿಡುತ್ತದೆ. ಅಲ್ಲಿಂದ ಒಂದು ವರ್ಷ ಪೂರ್ತಿ ಜನ್ಮ ಶತಮಾನೋತ್ಸವವನ್ನು ಆಚರಿಸಲು ಪ್ರತಿಷ್ಠಾನ ನಿರ್ಧರಿಸಿದೆ. ಈ ಸಂಬಂಧದಲ್ಲಿ ಕಾರ್ಯಯೋಜನೆಯನ್ನು ರೂಪಿಸಲು ತಾವು ಅಮೂಲ್ಯ ಸಲಹೆ ಸೂಚನೆಗಳನ್ನು ನೀಡಬೇಕಾಗಿ ವಿನಂತಿ.

ಪ್ರೊ॥ ಎಂ.ವಿ. ಸೀತಾರಾಮಯ್ಯನವರು ದಿನಾಂಕ: ೦೯-೦೯-೧೯೧೦ರಂದು ಜನಿಸಿ ದಿನಾಂಕ:೧೨-೦೩-೧೯೯೦ರಂದು ದೈವಾಧೀನರಾದರು. ಈ ಎಂಬತ್ತು ವರ್ಷಗಳ ತುಂಬು ಜೀವನದಲ್ಲಿ ಕನ್ನಡ ಸಾಹಿತ್ಯದಲ್ಲಿ ಮರೆಯಲಾಗದ ಸೇವೆಯನ್ನು ಸಲ್ಲಿಸಿದ್ದಾರೆ. ಕವಿ, ಕಲಾವಿದ, ವಿದ್ವಾಂಸರಾಗಿ ಕಥೆ, ಕಾದಂಬರಿ, ಕವನ, ಲಲಿತಪ್ರಬಂಧ, ನಾಟಕ, ಮಕ್ಕಳ ಸಾಹಿತ್ಯದಂತಹ ಸೃಜನಶೀಲ ಸಾಹಿತ್ಯ ಪ್ರಕಾರದಲ್ಲಿ ಪ್ರಮುಖರಾಗಿದ್ದಾರೆ. ಪಾಂಡಿತ್ಯ ಕ್ಷೇತ್ರದಲ್ಲೂ ಅಪಾರವಾದ ವಿದ್ವತ್ತನ್ನು ದಾಖಲಿಸಿರುವ ಶ್ರೇಷ್ಠದರ್ಜೆಯ ವಿದ್ವಾಂಸರಾಗಿದ್ದಾರೆ. ಕನ್ನಡದ ಮೊಟ್ಟಮೊದಲ ಕೃತಿ 'ಕವಿರಾಜಮಾರ್ಗ'ವನ್ನು ಶ್ರೀವಿಜಯಕೃತವೆಂದು ನಿರ್ಣಯಿಸಿದ ಕೀರ್ತಿ ಇವರದ್ದು, ತಿಮ್ಮಪ್ಪದಾಸರ ಕೃತಿಗಳು, ಪ್ರಾಚೀನ ಕನ್ನಡವ್ಯಾಕರಣ, ಕನ್ನಡ ಕಾವ್ಯಮೀಮಾಂಸೆಯಂತಹ ಶಾಸ್ತ್ರಸಾಹಿತ್ಯವನ್ನು ತಲಸ್ಪರ್ಷಿ ಶೋಧಿಸಿದ್ದಾರೆ.

ನಾಡು-ನುಡಿ, ಹೋರಾಟ-ಸಂಘಟನಾ ಕ್ಷೇತ್ರದಲ್ಲೂ ಎಂ.ವಿ.ಸೀಯವರು ಸಾಧಕರಾಗಿದ್ದಾರೆ. ಇಳಿವಯಸ್ಸಿನಲ್ಲೂ, ಅನಾರೋಗ್ಯದ ನಡುವೆಯೂ ಕನ್ನಡ ಪರ ಹೋರಾಟಗಳಲ್ಲಿ ಮುಂಚೂಣಿಯಲ್ಲಿರುತ್ತ ಕಾರ್ಯಕರ್ತರನ್ನು ಪ್ರೋತ್ಸಾಹಿಸುತ್ತಿದ್ದರು. ಆಚಾರ್ಯ ಬಿ.ಎಂ.ಶ್ರೀ. ಅವರ ಹೆಸರಿನಲ್ಲಿ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಸ್ಥಾಪಿಸಿ ನಾಡಿನ ಹೆಮ್ಮೆಯ ಸಂಶೋಧನ ಸಂಸ್ಥೆಯಾಗಿ ಕಟ್ಟಿದರು.

ಇಂತಹ ಹಲವು ಸಾಧನೆಗಳ ನೇತಾರರಾದ ಎಂ.ವಿ.ಸೀತಾರಾಮಯ್ಯನವರು ಪ್ರತಿಷ್ಠಾನದ ಮೂಲಕ 'ಹಸ್ತಪ್ರತಿಶಾಸ್ತ್ರ' ಎಂಬ ನೂತನ ಸಂಶೋಧನ ಕ್ಷೇತ್ರವನ್ನೇ ತೆರೆದು ಅಳಿಸಿಹೋಗುತ್ತಿದ್ದ ಪ್ರಾಚೀನ ಓಲೆಗರಿ-ಕಾಗದದ ಹಸ್ತಪ್ರತಿಗಳ ಸಂಗ್ರಹ-ಸಂರಕ್ಷಣೆಯತ್ತ ನಾಡಿನ ಗಮನ ಸೆಳೆದು ಹೊಸಪಡೆ ನಿರ್ಮಾಣವಾಗಲು ಪ್ರೇರಕರಾದರು. ಇದೀಗ ಈ ಕ್ಷೇತ್ರ ಸುಪುಷ್ಪವಾಗಿ ಬೆಳೆದು 'ಹಸ್ತಪ್ರತಿ ಅಧ್ಯಯನ' ಎಂಬ ಇನ್ನೊಂದು ಸಂಶೋಧನ ಕ್ಷೇತ್ರವನ್ನು ರೂಪಿಸುತ್ತಿದೆ. ಇದನ್ನು ಇನ್ನಷ್ಟು ವ್ಯಾಪಕವಾಗಿಸುವ ಉದ್ದೇಶದಿಂದ ಎಂ.ವಿ.ಸೀ ಅವರ ಶತಮಾನೋತ್ಸವ ವರ್ಷವನ್ನು **'ಹಸ್ತಪ್ರತಿ ಅಧ್ಯಯನ ವರ್ಷ'** ಎಂದು ಘೋಷಿಸಿ ನಾಡಿನಾದ್ಯಂತ ಕಾರ್ಯಕ್ರಮಗಳನ್ನು ರೂಪಿಸಲು ಆಲೋಚಿಸಲಾಗುತ್ತಿದೆ. ಎಂ.ವಿ.ಸೀ ಸಮಗ್ರ ಸಾಹಿತ್ಯ, ಸಂಸ್ಮರಣ ಸಂಪುಟ ಮತ್ತು ಇನ್ನೂ ಕೆಲವು ಕೃತಿಗಳ ಪ್ರಕಟಣೆ, ರಾಜಾದ್ಯಂತ ವಿಚಾರಗೋಷ್ಠಿ ಜಾಗೃತಿ ಕಾರ್ಯಕ್ರಮಗಳನ್ನು ನಡೆಸುವುದು ಇತ್ಯಾದಿ ಹಲವು ಯೋಜನೆಗಳನ್ನು ಹಮ್ಮಿಕೊಳ್ಳಬೇಕಾಗಿದೆ.

ಈ ನಿಟ್ಟಿನಲ್ಲಿ ತಾವೂ ಕಾರ್ಯಗತಗೊಳಿಸಬಹುದಾದ ಯೋಜನೆಗಳತ್ತ ಸಲಹೆ-ಸೂಚನೆಗಳನ್ನು ನೀಡಿ ಯೋಜನೆಯ ಯಶಸ್ಸಿಗೆ ಸಹಕರಿಸಬೇಕಾಗಿ ವಿನಂತಿ.

ಈ ಎಲ್ಲಾ ಕಾರ್ಯಚಟುವಟಿಕೆಗಳನ್ನು ಕಾರ್ಯಗತಗೊಳಿಸಲು ಒಂದು ರಾಜ್ಯಮಟ್ಟದ ಉತ್ಸವ ಸಮಿತಿಯನ್ನೂ ಕೆಲವು ಉಪಸಮಿತಿಗಳನ್ನೂ ರಚಿಸಬೇಕಾಗಿದ್ದು ತಾವು ಸಕ್ರಿಯವಾಗಿ ತೊಡಗಿಸಿಕೊಂಡು ಎಂ.ವಿ.ಸೀತಾರಾಮಯ್ಯನವರ ಶತಮಾನೋತ್ಸವವನ್ನು ಅರ್ಥಪೂರ್ಣಗೊಳಿಸಬೇಕಾಗಿ ಕೋರಿಕೆ. ■

ನಾಡೋಜ ಜಿ. ನಾರಾಯಣ
ಗೌರವಾಧ್ಯಕ್ಷರು

ಡಾ. ಪಿ.ವಿ. ನಾರಾಯಣ
ಅಧ್ಯಕ್ಷರು

ಸಂಪಾದಕೀಯ..............

"ಸರ್ವೇಷಾಂ ಸಮಸ್ತ ಸನ್ಮಂಗಳಾನಿ ಭವಂತು"

'ಶ್ರೀ ವಿರೋಧಿ'ನಾಮ ಸಂವತ್ಸರದಲ್ಲಿ ಪ್ರತಿಷ್ಠಾನದ ಸದಸ್ಯರಾದಿಯಾಗಿ ಸರ್ವರೂ ಸುಖಿಗಳಾಗಿ ಬಾಳಲಿ. ಎಲ್ಲರಿಗೂ ಸಮಸ್ತ ಸನ್ಮಂಗಳಗಳೂ ಲಭಿಸಲಿ ಎಂಬ ಹಾರ್ದಿಕ ಹಾರೈಕೆಯೊಂದಿಗೆ ಹಿರಿಯ ಸಾಹಿತಿಗಳ ಸವಿ ನುಡಿಯ ಸಿಹಿ ಜೇನು ಸವಿಯೋಣ. ಕಿರಿಯ ಸಾಹಿತಿಗಳ ಮಾದಕ, ಮೋಹಕ, ಮೆರಗು 'ಪೆಪ್ಪರ್‌ಮೆಂಟ್ ಚಪ್ಪರಿಸೋಣ' ಶ್ರೀ ವಿರೋಧಿನಾಮ ಸಂವತ್ಸರದಲ್ಲಿ ಪ್ರೀತಿ, ಪ್ರೇಮ, ಸ್ನೇಹ, ಸೌಹಾರ್ದ ಬೆಳೆಸೋಣ.

(ಹಳತು)

'ವಸಂತ ಬಂದ ಋತುಗಳ ರಾಜ ತಾ ಬಂದ
ಚಿಗುರನು ತಂದ, ಹೆಣ್ಗಳ ಕುಣಿಸುತ ನಿಂದ
ಚಳಿಯನು ಕೊಂದ, ಹಕ್ಕಿಗಳುಲಿಗಳೆ ಚೆಂದ
ಕೂಹೂ ಜಗ್‌ಜಗ್ ಪುವ್ವೀ ಟೂ ವಿಟ್ಟವು.

(ಬಿ.ಎಂ.ಶ್ರೀ. – ಇಂಗ್ಲೀಷ್ ಗೀತೆಗಳು)

ಹೆಜ್ಜೆಗೊಂದು ಹೊಸ ಯುಗಾದಿ
ಚೆಲುವು ನಮ್ಮ ಜೀವನ !
ನಮ್ಮ ಹಾದಿಯೋ ಅನಾದಿ
ಪಯಣವೆಲ್ಲ ಪಾವನ

(ಕೆ.ಎಸ್. ನರಸಿಂಹಸ್ವಾಮಿ – ಶಿಲಾಲತೆ)

ಹಸುರಿನ ಪಸೆಯಲಿ ಹೂ ಬಿಸಿಲಾಡಿಸಿ
ಹೊಸ ವರುಷವು ಕಾಲೂರುತ್ತಿದೆ!
ತುಂತುರು ಹನಿಗಳ ಮಂತ್ರಾಕ್ಷತೆಯಲಿ
ಅಂತರಂಗಗಳ ಕೆಣಕುತಿದೆ!

(ಡಾ. ಸಾ.ಶಿ. ಮರುಳಯ್ಯ – ಹೊಸ ವರುಷ)

(ಹೊಸತು)

ಹಳೆ ನೀರಿಗೆ ಹೊಸ ನೀರಿನ ಸ್ನಾನ
ಹಾಲು ಹಾಲಾಹಲಗಳ ಸಮರಸ ಚೇತನ ನಂಜುಂಡನೆ ನೀನು!
ಓ ಚೈತ್ರ ಚೇತನ ವಸಂತ
ನಿನಗಿದೋ ಕಾಲಯುಕ್ತನ ಸ್ವಾಗತ

(ಡಾ. ವಸಂತಕುಷ್ಟಗಿ – ಚೈತ್ರ ಚೈತನ್ಯನಿಗೆ ಸ್ವಾಗತ)

ಹಳತು ಹೊಸತುಗಳ ಸಮ್ಮಿಶ್ರಣ
ಯುಗಾದಿಯ ಬೇವುಬೆಲ್ಲ
ನೋವು ನಲಿವುಗಳ ಮಿಶ್ರಣ – ಈ ಜೀವನ
ಸಿಹಿ ಕಹಿಯ ಕಷಾಯವೇ ಸಿದ್ಧೌಷಧ

ಕಟ್ಟಿದ ಕೊರಳಿನ ಬಿಗು ಹಳಿದಂತೆ
ನಾಲಿಗೆ ತೊಡರದೆ ಹಾಡುತಿದೆ
ಲೇಖನಿಯಾಡುತಿದೆ !
ಹೃದಯವುರಸದಲಿ ಮಿಂದಿತ್ತು !
ಯುಗಾದಿ ನನಗೂ ಬಂದಿತ್ತು

(ತೀ.ನಂ.ಶ್ರೀ. – ಯುಗಾದಿ ನನಗೂ ಬಂತು)

ಬೆಟ್ಟದ ನೆತ್ತಿಯನ್ನೇರಿ
ಬೆಳಗು ಜಾವದಲಿ ರವಿ ಬಂದಾಗ
ಅವನ ಪೂಜೆಗಾಗಿ ಕಂದರದಲ್ಲಿ ಪ್ರಕೃತಿ
ಲೋಬಾನ ಹಾಕುತ್ತಾಳೆ

(ವಿನಾಯಕ – ವರ್ಷಾರಂಭ)

ಭೂಮಿ ತಾಯಿಗೆ ಪ್ರಸವ ವೇದನೆ
ಹೊಸ ಸೃಷ್ಟಿಯನ್ನು ಸ್ಫುಟಿಸಿ ಕೊಟ್ಟಿದೆ

(ಅನುವಾದ ವಿ. ಶ್ರೀನಿವಾಸ;
ಮೂಲ: ಡಾ. ಸಿ. ನಾರಾಯಣ ರೆಡ್ಡಿ)

ಹೊಸ ವರ್ಷ
ಮತ್ತೆ ಮತ್ತೆ ಒತ್ತಿ ಒತ್ತಿ ಕೊಯ್ಯುವ
ಹಳೆ ನೆನಪುಗಳ ಗರಗಸ

(ಡಾ. ಹೆಚ್.ಜೆ. ಲಕ್ಕಪ್ಪಗೌಡ – ಹೊಸ ವರ್ಷ)

ವಿಚಿತ್ರ ಚೈತ್ರ ಬಂತು, ಬಂದು ಹೋಗಾಯ್ತು
ಶ್ರೀ ಸಾಮಾನ್ಯನ ಮೊರೆಗೆ ಕಿವಿಗೊಡದ
ಆಳ್ವಿಕೆಯೊಂದು ಅಳಿದಾಯ್ತು
ಜಾಗ್ರತೆ! ಎಲ್ಲಕ್ಕೂ ಕೈಮುಗಿವ ಹೌದಪ್ಪ
ಗಳಿದ್ದಾರೆ, ಎಚ್ಚರಿಕೆ! ಕಳೆದ
ದುರಂತಗಳು ಮರಳಿ ಬಂದಾವು ಜೋಕೆ

(ಡಾ. ಮೈ.ಶ್ರೀ ನಟರಾಜ್ –ಅಮೇರಿಕಾ

ಹಳತು–ಹೊಸತು ಗೀತ ರಚನೆಯ 'ದನಿ' ಬೇರೆ ಬೇರೆ ಆದರೂ, ಹತಾಶ ಆಶಯ ಮಾತ್ರ 'ಒಳಿತು' ಎಂಬುದೇ ಗಮನಾರ್ಹ ಸತ್ಯ. ಹೊಸ ವರ್ಷಾದ್ಯಂತಾ ಸಾಹಿತ್ಯಿಕ, ಸಾಂಸ್ಕೃತಿಕ, ಮಕರಂದ ನಮ್ಮನ್ನೆಲ್ಲ ನಿರಂತರ ತಣಿಸುತ್ತಿರಲಿ ಎಂದು ಆಶಿಸೋಣ.

ಎಸ್.ವಿ. ಶ್ರೀನಿವಾಸರಾವ್
ಸಂಪಾದಕರು

ಪ್ರತಿಷ್ಠಾನದ ವಾರ್ತೆ

'ಶ್ರೀಉತ್ಸವ'

೧) ೦೩-೦೧-೨೦೦೯ರಂದು ಶನಿವಾರ ಬೆಳಿಗ್ಗೆ ೯-೦೦ ಗಂಟೆಗೆ ನ್ಯಾಷನಲ್ ಕಾಲೇಜಿನ ವೃತ್ತದಲ್ಲಿರುವ ಬಿ.ಎಂ.ಶ್ರೀ. ಪ್ರತಿಮೆಗೆ ಮಾಲಾರ್ಪಣೆ ಕಾರ್ಯಕ್ರಮ

ಆಚಾರ್ಯ ಬಿ.ಎಂ.ಶ್ರೀ. ಅವರ ಜನ್ಮ ದಿನವಾದ ತಾ|| ೩-೧-೦೯ ರಂದು ಬೆಳಿಗ್ಗೆ ಪ್ರತಿವರ್ಷದಂತೆ ಅವರ ಪ್ರತಿಮೆಗೆ ಮಾಲಾರ್ಪಣೆ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಬಸವನಗುಡಿ ಕ್ಷೇತ್ರದ ಶಾಸಕರಾದ ಶ್ರೀ ಎಲ್.ಎ. ರವಿಸುಬ್ರಹ್ಮಣ್ಯ ಅವರು ಮಾಲಾರ್ಪಣೆ ಮಾಡಿ ನಮ್ಮ ಪ್ರತಿಷ್ಠಾನದ ಎಲ್ಲಾ ಚಟುವಟಿಕೆಗಳಿಗೂ ತಾವು, ಹಾಗೂ ವಿಧಾನಸಭೆ ಮತ್ತು ಪರಿಷತ್ತಿನ ಇತರ ಸದಸ್ಯರ ಸಹಾಯ/ಸಹಕಾರ ದೊರಕಿಸಿಕೊಡುವ ಆಶ್ವಾಸನೆ ನೀಡಿದರು. ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಪತ್ರಕರ್ತ ಶ್ರೀ ಟಿ. ನಾಗರಾಜ್, ಬಿ.ಎಂ.ಶ್ರೀ. ಅವರ ಬಂಧು ಶ್ರೀ ಎನ್.ಎಸ್. ಕೃಷ್ಣಸ್ವಾಮಿ, ಪ್ರತಿಷ್ಠಾನದ ಅಧ್ಯಕ್ಷ ಡಾ. ಪಿ.ವಿ. ನಾರಾಯಣ, ಕಾರ್ಯದರ್ಶಿಗಳಾದ ಡಾ. ನಾ. ಗೀತಾಚಾರ್ಯ, ಶ್ರೀ ಎಸ್.ವಿ. ಶ್ರೀನಿವಾಸಲಾವ್ ಮುಂತಾದವರು ಉಪಸ್ಥಿತರಿದ್ದರು. ಪ್ರಾರಂಭದಲ್ಲಿ ಶ್ರೀಮತಿ ರಮಾದೇವಿ ವಿಶ್ವೇಶ್ವರಯ್ಯ ಅವರು ಬಿ.ಎಂ.ಶ್ರೀ ಅವರ ಕೆಲಗೀತೆಗಳನ್ನು ಸುಶ್ರಾವ್ಯವಾಗಿ ಹಾಡಿದರು. ಶಾಸಕ ರವಿಸುಬ್ರಹ್ಮಣ್ಯ ಅವರು ಅಲ್ಲಿಗೆ ಆಗಮಿಸಿದ್ದ ಇಂಜಿನಿಯರ್‌ಗೆ, ಪ್ರತಿಮೆ ಬಳಿಗೆ ಸುಲಭವಾಗಿ ಹೋಗಿ ಬರಲು ಅನುಕೂಲವಾಗುವ ರೀತಿಯಲ್ಲಿ ಮೆಟ್ಟಿಲುಗಳನ್ನು ನಿರ್ಮಿಸಲು ಆದೇಶ ನೀಡಿದರು. ಈ ಕಾರ್ಯಕ್ರಮದ ನಂತರ ಎಲ್ಲರೂ ಮುಂದಿನ ಕಾರ್ಯಕ್ರಮದಲ್ಲಿ ಭಾಗವಹಿಸಲು ಪ್ರತಿಷ್ಠಾನದತ್ತ ಹೊರಟರು. ಬಿ.ಎಂ.ಶ್ರೀ. ಕಲಾಭವನದಲ್ಲಿ.

೨) ೩-೧-೨೦೦೯ರಂದು ಶನಿವಾರ ಬೆಳಿಗ್ಗೆ ೧೦-೩೦: ಕಣಕಟ್ಟೆ ಕೃಷ್ಣಮೂರ್ತಿರಾವ್ ದತ್ತಿ ಕಾರ್ಯಕ್ರಮ (ದತ್ತಿ ದಾನಿಗಳು ಡಾ. ಕೆ. ಶ್ರೀಕಂಠಯ್ಯ): ಬಿ.ಎಂ.ಶ್ರೀ. ಪ್ರತಿಮೆಗೆ ಮಾಲಾರ್ಪಣೆ; ಸಿರಿ ಸಂಗೀತ ('ಶ್ರೀ' ಗೀತೆಗಳ ಗಾಯನ) ಮತ್ತು 'ಹಸ್ತಪ್ರತಿ ಅಧ್ಯಯನ' ತರಗತಿ ಉದ್ಘಾಟನೆ.

ಈ ಎಲ್ಲಾ ಕಾರ್ಯಕ್ರಮಗಳ ಉದ್ಘಾಟನೆಯನ್ನು ಖ್ಯಾತ ಸಂಶೋಧಕ ಡಾ. ಚಿದಾನಂದಮೂರ್ತಿ ನೆರವೇರಿಸಿದರು, ಡಾ. ನಾ. ಗೀತಾಚಾರ್ಯ ಪ್ರಾಸ್ತಾವಿಕ ಭಾಷಣ ಮಾಡಿದರು. ಬಿ.ಎಂ.ಶ್ರೀ. ಬಂಧುಗಳಾದ ಶ್ರೀ ಎಚ್.ಕೆ ಸೀತಾರಾಮ್ ಅವರು ಬಿ.ಎಂ.ಶ್ರೀ. ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಹಿರಿಯರಾಗಿದ್ದ ಬಿ.ಎಂ.ಶ್ರೀ. ಅವರ ಉದಾತ್ತತೆಯನ್ನೂ ಸ್ಮರಿಸಿಕೊಂಡು ವಂದಿಸಿದರು. ನಾಡೋಜ ಜಿ. ನಾರಾಯಣ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಹಸ್ತಪ್ರತಿ ಅಧ್ಯಯನ ತರಗತಿಗಳ ಉದ್ಘಾಟನೆಯನ್ನೂ ಡಾ. ಚಿದಾನಂದಮೂರ್ತಿ ನೆರವೇರಿಸಿ ಹಸ್ತಪ್ರತಿಶಾಸ್ತ್ರದ ಉಪಯುಕ್ತತೆ ಹಾಗೂ ಅಧ್ಯಯನದ ಅವಶ್ಯಕತೆಯನ್ನು ವಿವರಿಸಿದರು. ಈ ಕಾರ್ಯಕ್ರಮಗಳ ನಂತರ ಖ್ಯಾತ ಗಾಯಕ ಶ್ರೀ ನಾರಾಯಣರಾವ್ ಮಾನೆ ಅವರು ತಮ್ಮ ಸಂಗಡಿಗರೊಡನೆ ಸುಗಮ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. ಶ್ರೀ ಶ್ರೀನಿವಾಸರಾವ್ ವಂದನಾರ್ಪಣೆಮಾಡಿದರು. ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಪಿ.ವಿ. ನಾರಾಯಣ ಅವರು ಅತಿಥಿಗಳಿಗೆ ನೆನಪಿನ ಕಾಣಿಕೆಯನ್ನು ನೀಡಿದರು.

೩) ಬೆಳ್ಳೂರಿನಲ್ಲಿನಲ್ಲಿ ಮಾಲಾರ್ಪಣೆ ಕಾರ್ಯಕ್ರಮ

ಅದೇ ದಿನ ಬೆಳ್ಳೂರಿನ ಬಸ್‌ನಿಲ್ದಾಣದಲ್ಲಿರುವ ಬಿ.ಎಂ.ಶ್ರೀ ಪ್ರತಿಮೆಗೆ ಬೆಳ್ಳೂರು ಗ್ರಾಮಪಂಚಾಯಿತಿ ಅಧ್ಯಕ್ಷ ಶ್ರೀ ಬಿ.ಆರ್. ರೋಹಿತ್ ಅವರಿಂದ ಮಾಲಾರ್ಪಣೆ ಕಾರ್ಯಕ್ರಮ ನಡೆದಿತ್ತು. ಮುಖ್ಯ ಅತಿಥಿಗಳಾಗಿ ಶ್ರೀ ಅಬ್ದುಲ್ ಅಲೀಮ್ ಆಗಮಿಸಿದ್ದರು. ಶ್ರೀ ಎಸ್. ಕೃಷ್ಣಮೂರ್ತಿ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಸೋಮಸುಂದರ್, ಶ್ರೀ ಎ.ಆರ್. ಸಿಂಗ್, ಶ್ರೀ ಬಿ.ಜೆ. ಸುನಿಲ್‌ಕುಮಾರ್ ಮುಂತಾದವರೊಡನೆ ಬೆಳ್ಳೂರಿನ ಹಲವು ಪ್ರಮುಖರು ಉಪಸ್ಥಿತರಿದ್ದರು.

೪) ೦೪-೦೧-೨೦೦೯ ಭಾನುವಾರ ಬೆಳ್ಳೂರಿನ ಬಿ.ಎಂ.ಶ್ರೀ ಶತಮಾನ ಭವನದಲ್ಲಿ ಬಿ.ಎಂ.ಶ್ರೀ ಅವರ ಬಗ್ಗೆ ನಡೆಸಿದ್ದ ಗೀತೆ, ಪ್ರಬಂಧ, ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಣೆ ಸಮಾರಂಭ.

ಬೆಂಗಳೂರಿನಿಂದ ಪ್ರತಿಷ್ಠಾನದ ಕಾರ್ಯದರ್ಶಿಗಳಾದ ಡಾ. ನಾ. ಗೀತಾಚಾರ್ಯ, ಶ್ರೀ ಎಸ್.ವಿ. ಶ್ರೀನಿವಾಸರಾವ್, ಬಿ.ಎಂ.ಶ್ರೀ ಅವರ ಬಂಧು ಶ್ರೀ ಎನ್.ಎಸ್. ಕೃಷ್ಣಸ್ವಾಮಿ, ಶ್ರೀಮತಿ ಅನಸೂಯರಾವ್, ಶ್ರೀಮತಿ ರಮಾದೇವಿ ವಿಶ್ವೇಶ್ವರಯ್ಯ ಬೆಳ್ಳೂರಿಗೆ ಹೋಗಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಅಲ್ಲಿನ ಕಾರ್ಯದರ್ಶಿ ಶ್ರೀ ಎ.ಆರ್. ಸಿಂಗ್ ಹಾಗೂ ಕೋಶಾಧ್ಯಕ್ಷರು, ಶ್ರೀ ಬಿ.ಜೆ. ಸುನಿಲ್‌ಕುಮಾರ್ ಮುಂತಾದವರು ಉಪಸ್ಥಿತರಿದ್ದು ಕಾರ್ಯಕ್ರಮ ಸುಗಮವಾಗಿ ನಡೆಯಲು ನೆರವು ನೀಡಿದರು. ಬಹುಮಾನ ವಿತರಣೆಯ ನಂತರ ಡಾ. ನಾ. ಗೀತಾಚಾರ್ಯ, ಶ್ರೀನಿವಾಸರಾವ್, ಮಾತನಾಡಿ ಬಿ.ಎಂ.ಶ್ರೀ ಬಗ್ಗೆ ಹಾಗೂ ಪ್ರತಿಷ್ಠಾನದ ಕಾರ್ಯಚಟುವಟಿಕೆಯ ಬಗ್ಗೆ ಬೆಳಕು ಚೆಲ್ಲಿದರು. ಬೆಳ್ಳೂರಿನಲ್ಲಿ ಹೆಚ್ಚು ಆಸಕ್ತಿಯಿಂದ ಕಾರ್ಯಕ್ರಮಗಳನ್ನು ನಡೆಸಿಕೊಂಡು ಹೋಗಲು ಸೂಕ್ತ ಸಲಹೆಗಳನ್ನು ನೀಡಿ, ತುರ್ತುಸಭೆ ನಡೆಸಿ ಕಾರ್ಯಕಾರಿಸಮಿತಿಯನ್ನು ಪುನರ್ರಚಿಸುವ ಮತ್ತು ತೆರವುಗೊಳಿಸಿದ್ದ ಗ್ರಂಥಾಲಯಕ್ಕೆ ಭವನದಲ್ಲೇ ಸ್ಥಳ ಒದಗಿಸುವ ಅಗತ್ಯವನ್ನು ಸಭೆಯಲ್ಲಿ ತೀರ್ಮಾನಿಸಿ ಅಧ್ಯಕ್ಷರ/ಕಾರ್ಯದರ್ಶಿಗಳ ಗಮನಕ್ಕೆ ತರಲು ಹಾಜರಿದ್ದ ಸದಸ್ಯರಿಗೆ ಸೂಚಿಸಿದರು.

೫) ೨೭-೦೧-೨೦೦೯ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಕನ್ನಡ ಗೆಳೆಯರ ಬಳಗದ ಸಹಕಾರದೊಡನೆ ಆಯೋಜಿಸಿದ್ದ 'ಶಂಬಾ ದತ್ತಿ ಕಾರ್ಯಕ್ರಮ', 'ಕನ್ನಡ ಶಾಸ್ತ್ರೀಯಭಾಷೆ - ಕ್ರಿಯಾಯೋಜನೆ ಚಿಂತನಗೋಷ್ಠಿ'

ಈ ಕಾರ್ಯಕ್ರಮವನ್ನು ಡಾ. ಎಂ. ಚಿದಾನಂದಮೂರ್ತಿಯವರು ಉದ್ಘಾಟಿಸಿ, ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರಕಿಸಿಕೊಡಲು ತಾವು ಹಾಗೂ ತಮ್ಮ ಮಿತ್ರರು ಪಟ್ಟಶ್ರಮ ಹಾಗೂ ಈ ಮಾಹಿತಿಯನ್ನು ಸಂಗ್ರಹಿಸಲು ಪಟ್ಟ ಬವಣೆ, ವರದಿ ತಯಾರಿಕೆಯಲ್ಲಿ ಪಟ್ಟ ಅವಿಶ್ರಾಂತ ಶ್ರಮ ವಿವರಿಸಿದರು. ಈ ಬಗ್ಗೆ ಸಹಕರಿಸಿದ ಎಲ್ಲಾ ವಿದ್ವಾಂಸರುಗಳಿಗೂ ಕೃತಜ್ಞತೆ ಸಲ್ಲಿಸಿದರು. ಶಾಸ್ತ್ರೀಯ ಸ್ಥಾನಮಾನ ನೀಡಲು ಒಪ್ಪಿರುವ

ಕೇಂದ್ರ ಸರ್ಕಾರಕ್ಕೆ ವಂದನೆ ಸಲ್ಲಿಸಿದರು ಹಾಗೂ ಈ ಬಗ್ಗೆ ಗೆಜೆಟ್ ಪ್ರಕಟಣೆ ಶೀಘ್ರವೇ ಮಾಡಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದರು. ಕನ್ನಡ ಶಾಸ್ತ್ರೀಯ ಭಾಷೆ-ಕ್ರಿಯಾ ಯೋಜನೆ ಚಿಂತನಗೋಷ್ಠಿಯಲ್ಲಿ ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿಗಳು ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ಗಳಿಸಲು ಇರುವ ಅರ್ಹತೆ ಬಗ್ಗೆ ವಿಸ್ತೃತ ಹಾಗೂ ಮಹತ್ವದ ವಿವರಣೆ ನೀಡಿ ರಾಜಕೀಯ ಕಾರಣ ಗಳಿಂದಾಗಿ ಇನ್ನೂ ಪೂರ್ಣರೀತಿಯಲ್ಲಿ ಇದು ಅನುಷ್ಠಾನಗೊಳ್ಳದೆ ಇರುವ ಬಗ್ಗೆ ವಿಷಾದ ವ್ಯಕ್ತಪಡಿಸಿ ಶಾಸ್ತ್ರೀಯ ಸ್ಥಾನಮಾನ ಗಳಿಸಿದ ನಂತರ ಈ ಬಗ್ಗೆ ಆಗಬೇಕಾಗಿರುವ ಬೃಹತ್ ಕಾರ್ಯ ಯೋಜನೆಗಳ ಬಗ್ಗೆ ಬೆಳಕು ಚೆಲ್ಲಿದರು. ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಗಳಿಸಿಕೊಡಲು ಶ್ರಮಿಸಿದ ಶ್ರೀ ರಾಜಶೇಖರನ್, ಡಾ. ಚಿದಾನಂದಮೂರ್ತಿ, ಪ್ರೊ. ಎಲ್.ಎಸ್. ಶೇಷಗಿರಿರಾವ್, ಮುಂತಾದವರ ಅನುಪಮ ಕೊಡುಗೆಯನ್ನು ಶ್ಲಾಘಿಸಿದರು. ನಾಡೋಜ ಜಿ. ನಾರಾಯಣ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದ ಪ್ರಾರಂಭದಲ್ಲಿ ಬಾಲಕಿಯರಾದ ಸ್ನಿದ್ಧ ಮತ್ತು ದ್ಯುತಿ ಬಹಳ ಮಧುರವಾಗಿ ಪಂಪನ ಪದ್ಯಗಳ ಕಾವ್ಯವಾಚನ ಮಾಡಿ ಎಲ್ಲರ ಮೆಚ್ಚುಗೆ ಗಳಿಸಿದರು. ಶ್ರೀ ಎಸ್.ವಿ. ಶ್ರೀನಿವಾಸ್‌ರಾವ್ ಅವರು ಮುಖ್ಯ ಅತಿಥಿಗಳ ಪರಿಚಯ ಮಾಡಿ, ಸ್ವಾಗತಿಸಿದರು. ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಪಿ.ವಿ. ನಾರಾಯಣ ಎಲ್ಲರಿಗೂ ವಂದನೆ ಸಲ್ಲಿಸಿ ಆಹ್ವಾನಿತ ಮುಖ್ಯ ಅತಿಥಿಗಳಿಗೆ ನೆನಪಿನ ಕಾಣಿಕೆ ನೀಡಿದರು.

೬) ೦೮-೦೨-೦೯ ಕಾಳಿಂಗರಾಯರ ಬಳಗದ ದತ್ತಿಯಿಂದ ರಾಜ್ಯಮಟ್ಟದ ಸುಗಮ ಸಂಗೀತಸ್ಪರ್ಧೆ

ರಾಜ್ಯಮಟ್ಟದ ಬಿ.ಎಂ.ಶ್ರೀ. ಭಾವಗೀತೆ, ಪಿ. ಕಾಳಿಂಗರಾವ್ ಜನಪದಗೀತೆ ಮತ್ತು ಎಂ.ವಿ.ಸೀ. ನಾಡುನುಡಿಗೀತೆ - ಸ್ಪರ್ಧೆ ಕಾರ್ಯಕ್ರಮವನ್ನು ಖ್ಯಾತ ಸಂಗೀತ ಕಲಾವಿದೆ ಶ್ರೀಮತಿ ರಮಾ ಅರವಿಂದ್ ಉದ್ಘಾಟಿಸಿದರು. ಡಾ. ನಾ. ಗೀತಾಚಾರ್ಯ ಅಧ್ಯಕ್ಷತೆ ವಹಿಸಿದ್ದರು. ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ್ದ ೫೦ಕ್ಕೂ ಹೆಚ್ಚು ಜನ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಸಂಜೆ ನಡೆದ ಬಹುಮಾನ ವಿತರಣೆ ಸಮಾರಂಭದಲ್ಲಿ ನಾಡೋಜ ಜಿ. ನಾರಾಯಣ ಬಹುಮಾನ ವಿತರಣೆ ಮಾಡಿದರು. ಮುಖ್ಯ ಅತಿಥಿಗಳಾಗಿ ಶ್ರೀ ಮಲ್ಲಿಕಾರ್ಜುನ ನಾಗೇನಹಳ್ಳಿ, ಶ್ರೀ ಶಶಿಧರ್, ಶ್ರೀಮತಿ ಜಯಾ ಮಲ್ಲೇಶ ಆಗಮಿಸಿದ್ದರು. ಡಾ. ಪಿ.ವಿ. ನಾರಾಯಣ ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ಮತ್ತು ಶ್ರೀ ಜಯಾಪಾರ್ಥಸಾರಥಿ ಕಾರ್ಯಕ್ರಮ ನಿರ್ವಹಿಸಿದರು.

೨೧-೦೨-೨೦೦೯ ಶನಿವಾರ ಸಂಜೆ ೫-೩೦ಕ್ಕೆ ೨೦೦೭-೦೮ನೇ ಸಾಲಿನ ಎಂಫಿಲ್ ಪದವಿ ಪ್ರದಾನ ಮತ್ತು ಹಳಗನ್ನಡ ಕಾವ್ಯಾಭ್ಯಾಸ ಪ್ರಮಾಣಪತ್ರ ವಿತರಣೆ ಹಾಗೂ ೯ನೇ ತಂಡದ ಹಳಗನ್ನಡ ಕಾವ್ಯಾಭ್ಯಾಸ ಶಿಬಿರ ಉದ್ಘಾಟನೆ

ಶ್ರೀ ವೀರಭದ್ರಾಚಾರ್ ಅವರ ಪ್ರಾರ್ಥನೆಯೊಡನೆ ಕಾರ್ಯಕ್ರಮ ಪ್ರಾರಂಭವಾಯಿತು. ಕಾವ್ಯಾಭ್ಯಾಸ ಶಿಬಿರದ ಉದ್ಘಾಟನೆ ನೆರವೇರಿಸಿದ ನಿಘಂಟು ತಜ್ಞ, ನಾಡೋಜ ಜಿ. ವೆಂಕಟಸುಬ್ಬಯ್ಯ ಅವರು ಎಂಫಿಲ್ ಮತ್ತು ಹಳಗನ್ನಡ ಕಾವ್ಯಾಭ್ಯಾಸ ಶಿಬಿರಾರ್ಥಿಗಳಿಗೆ ಪ್ರಮಾಣಪತ್ರ ವಿತರಿಸಿ ಅವರಿಗೆ ಶುಭ ಹಾರೈಸಿದರು. ಡಾ. ಪಿ.ವಿ. ನಾರಾಯಣ ಅಧ್ಯಕ್ಷತೆ



ಹಳಗನ್ನಡ ಕಾವ್ಯಾಭ್ಯಾಸ ಪ್ರಮಾಣ ಪತ್ರ ವಿತರಣೆ ಸಮಾರಂಭ

ವಹಿಸಿದ್ದರು. ಡಾ. ನಾ. ಗೀತಾಚಾರ್ಯರು ಪ್ರಾಸ್ತಾವಿಕ ಭಾಷಣ ಮಾಡಿ ಕಾವ್ಯಾಭ್ಯಾಸ ಶಿಬಿರದ ಬಗ್ಗೆ ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ ಎಂಫಿಲ್ ಹಾಗೂ ಹಳಗನ್ನಡ ಕಾವ್ಯಾಭ್ಯಾಸದ ಮಾರ್ಗದರ್ಶಕ ವಿದ್ವಾಂಸರುಗಳು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಹಳಗನ್ನಡ ಶಿಬಿರಾರ್ಥಿಗಳ ಪರವಾಗಿ ಶ್ರೀ ಎನ್. ರವೀಂದ್ರನಾಥ್, ಎಂಫಿಲ್ ವಿದ್ಯಾರ್ಥಿಗಳ ಪರವಾಗಿ ಶ್ರೀ ಧನಂಜಯ, ಶ್ರೀಮತಿ ವಜ್ರೇಶ್ವರಿ, ಸುಷ್ಮ, ಅನುಭವಗಳನ್ನು ಹಂಚಿಕೊಂಡು ಮಾರ್ಗದರ್ಶಕ ಉಪನ್ಯಾಸಕರುಗಳಿಗೆ ಕೃತಜ್ಞತೆ ಸಲ್ಲಿಸಿದರು, ಶ್ರೀ ಕೆ. ಬಸವರಾಜಪ್ಪ ಕಾರ್ಯಕ್ರಮದ ನಿರ್ವಹಣೆ ಮಾಡಿದರು ಪ್ರೊ. ಕೆ.ಎಸ್. ಮಧುಸೂದನ್‌ರವರು ಎಲ್ಲರನ್ನೂ ವಂದಿಸಿದರು.

೧೨-೦೩-೨೦೦೯ ಗುರುವಾರ, ಸಂಜೆ ೫-೩೦ಕ್ಕೆ ಎಂ.ವಿ.ಸೀ. ಸಂಸ್ಮರಣೆ ಮತ್ತು ೨೦೦೮-೦೯ನೇ ಸಾಲಿನ ಎಂ.ಫಿಲ್ ಮತ್ತು ಹಸ್ತಪ್ರತಿ ತರಗತಿ ಸಮಾರೋಪ ಕಾರ್ಯಕ್ರಮ

ಈ ಕಾರ್ಯಕ್ರಮ ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಪಿ.ವಿ. ನಾರಾಯಣ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಮುಖ್ಯ ಅತಿಥಿಗಳಾಗಿ ಮಾರ್ಗದರ್ಶಕರಾಗಿದ್ದ ಸನ್ಮಾನ್ಯ ಡಾ. ಕೆ.ಪಿ. ಭಟ್, ಡಾ. ಕೆ.ಆರ್ ಗಣೇಶ್, ಪ್ರೊ. ಜಿ. ಅಶ್ವತ್ಥನಾರಾಯಣ, ಡಾ. ವಿಜಯಾಸುಬ್ಬರಾಜ್ ಪ್ರೊ. ಡಿ.ಲಿಂಗಯ್ಯ, ಶ್ರೀ ಕೆ.ಎಸ್. ಮಧುಸೂದನ್, ಡಾ. ಪಿ.ವಿ ಕೃಷ್ಣಮೂರ್ತಿ ಆಗಮಿಸಿದ್ದರು. ಎಂ.ಫಿಲ್ ವಿದ್ಯಾರ್ಥಿ ಶ್ರೀ ಕೆ ಬಸವರಾಜಪ್ಪರವರು ಎಲ್ಲರನ್ನು ಸ್ವಾಗತಿಸಿ ಮಾರ್ಗದರ್ಶಕರುಗಳನು ಮುಕ್ತಕಂಠದಿಂದ ಪ್ರಶಂಸಿಸಿ, ಎಲ್ಲರಿಗೂ ಹೂಗುಚ್ಛ ಹಾಗೂ ಫ ನೀಡಿ ಆಭಾರ ಮನ್ನಣೆ ಸಲ್ಲಿಸಿದರು. ವಿದ್ಯಾರ್ಥಿಗಳ ಪರವಾಗಿ ಕುಮಾ ವಜ್ರೇಶ್ವರಿ, ಶ್ರೀ ದೇವರಾಜ್ ರವರು ಮಾತನಾಡಿ ಮಾರ್ಗದರ್ಶ ನೀಡಿದ ವಿದ್ವಾಂಸರುಗಳಿಗೆ ಕೃತಜ್ಞತೆ ಸಲ್ಲಿಸಿದರು. ಪ್ರತಿಷ್ಠಾನದ ಅಧ್ಯಕ್ಷರಾ ಡಾ. ಪಿ.ವಿ. ನಾರಾಯಣ ಎಲ್ಲಾ ವಿದ್ಯಾರ್ಥಿಗಳಿಗೂ ಶುಭ ಹಾರೈ ಎಲ್ಲರೂ ಎಂ.ಫಿಲ್‌ನಲ್ಲಿ ಉಚ್ಚ ತರಗತಿಯಲ್ಲಿ ಉತ್ತೀರ್ಣರಾ ಶೀಘ್ರದಲ್ಲೇ ಡಾಕ್ಟರೇಟ್ ಸಹ ಗಳಿಸಲು ಸಮರ್ಥರಾಗಲಿ ಎಂದ ಆಶಿಸಿ ಎಲ್ಲರಿಗೂ ಶುಭಕೋರಿದರು. ಎಂ.ವಿ.ಸೀ ಅವರ ಪು ಶ್ರೀ ಭಾಸ್ಕರ್‌ರವರು ತಂದೆ ಬಗ್ಗೆ ರಚಿಸಿರುವ ಕವನ ವಾಚಿಸಿದರು.

೨೨-೦೩-೨೦೦೯ರಂದು ಕಾರ್ಯಸಮಿತಿಯ ಸಭೆ ೯-೩೦ ಗಂಟೆಗೆ ಪ್ರತಿಷ್ಠಾನದ ಗೌರವಾಧ್ಯಕ್ಷರಾದ ನಾಡೋಜ ಜಿ. ನಾರಾಯಣ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಯು ಈ ಕೆಳಕಂಡ ವಿಷಯಗಳನ್ನು ಚರ್ಚಿಸಿತು.

ಚರ್ಚಿಸಿದ ವಿಷಯಗಳು :

(೧) ಹಿಂದಿನ ಸಭೆಯ ವರದಿಯ ಅನುಮೋದನೆ (೨) ಈವರೆಗಿನ ಕಾರ್ಯಕ್ರಮಗಳ ವರದಿ (೩) ಜಮಾ-ಖರ್ಚು ವರದಿ (೪) ಎಂ.ವಿ.ಸೀ. ಶತಮಾನೋತ್ಸವ ಸಮಿತಿ ರಚನೆ ವಿಚಾರ (೫) ಪ್ರತಿಷ್ಠಾನದ ತ್ರಿದಶಮಾನೋತ್ಸವ ವಿಚಾರ (೬) ಎಂ.ವಿ.ಸಿ. ಸಭಾಂಗಣ ವಿಚಾರ (೭) ಇತರೆ ವಿಚಾರಗಳು

ಪ್ರಾರಂಭದಲ್ಲಿ ಕಾರ್ಯದರ್ಶಿ ಡಾ. ನಾ. ಗೀತಾಚಾರ್ಯ ಎಲ್ಲರನ್ನು ಸ್ವಾಗತಿಸಿ ಹಿಂದಿನ ಸಭೆಯ ವರದಿ, ಈ ವರ್ಷದ ಕಾರ್ಯಕ್ರಮಗಳ ವರದಿ, ಜಮಾ-ಖರ್ಚಿನ ವರದಿ ಮಂಡಿಸಿದರು. ಸಭೆ ಹೆಚ್ಚು ಚರ್ಚೆ ಇಲ್ಲದೆ ಒಪ್ಪಿಗೆ ನೀಡಿತು. ಎಂ.ವಿ.ಸಿ ಶತಮಾನೋತ್ಸವ ಸಂವತ್ಸರವನ್ನಾಗಿ ದಿನಾಂಕ :೦೯-೦೯-೨೦೦೯ ರಿಂದ ೦೮-೦೯-೨೦೧೦ ಇಡೀ ವರ್ಷ ಸೂಕ್ತ ಕಾರ್ಯಕ್ರಮಗಳನ್ನು ರೂಪಿಸಿ ರಾಜ್ಯಾದ್ಯಂತ ನಡೆಸಿಕೊಂಡು ಬರಲು ಸಭೆ ಒಪ್ಪಿಗೆ ನೀಡಿ ವಿವರಗಳನ್ನು ಚರ್ಚಿಸಿ, ನಿರ್ಧಾರ ತೆಗೆದುಕೊಳ್ಳಲು ಸೂಕ್ತ ವ್ಯಕ್ತಿಗಳ ಒಂದು ಸಮಿತಿಯನ್ನು ರಚಿಸಲೂ ಒಪ್ಪಿಗೆ ನೀಡಿತು. ಎಂ.ವಿ.ಸೀ ಅವರ ಶತಮಾನೋತ್ಸವವನ್ನು ನಡೆಸುತ್ತಿರುವುದರಿಂದ ತ್ರಿದಶಮಾನೋತ್ಸವ ನಡೆಸುವ ವಿಚಾರ ಕೈಬಿಡಬಹುದೆಂದು ಸೂಚಿಸಿತು. ಎಂ.ವಿ.ಸೀ ಸಭಾಂಗಣ ನವೀಕರಣಗೊಳಿಸುವ ಬಗ್ಗೆ ಹಾಗೂ ಸಚಿವ ಶ್ರೀ ರಾಮಚಂದ್ರೇಗೌಡ ಅವರು ನೀಡಿರುವ ೨ ಲಕ್ಷ ಅನುದಾನದ ಬಳಕೆ ಬಗ್ಗೆ ಆಗಿರುವ ಪ್ರಗತಿ ತೃಪ್ತಿದಾಯಕವಾಗಿಲ್ಲವೆಂಬ ಅಂಶವನ್ನು, ಕಾರ್ಯದರ್ಶಿಗಳು ಸಮಿತಿಯ ಗಮನಕ್ಕೆ ತಂದರು. ಈ ಕಾರ್ಯ ನಿರ್ವಹಣೆಯನ್ನು ಹೊತ್ತಿರುವ ಶ್ರೀ ಜ್ಯೋತೀಶ್ವರ ಅವರು ಈ ದಿಸೆಯಲ್ಲಿ ಆಗಿರುವ / ಆಗುತ್ತಿರುವ ತೊಂದರೆಗಳನ್ನು ಸಭೆಯ ಮುಂದೆ ನಿವೇದಿಸಿಕೊಂಡರು. ಸಭಾಂಗಣದಲ್ಲಿ ಕಾರ್ಯಕ್ರಮ ನಡೆಸತೊಡಗಿದರೆ ಪಕ್ಕದ ಮನೆಯಿಂದ ಹಾಡಿನ ಕ್ಯಾಸೆಟ್ ಹಾಕಿ ಸಭೆಯ ಕಾರ್ಯಕಲಾಪಗಳಿಗೆ ತೊಂದರೆ ಒಡ್ಡುತ್ತಿರುವುದರಿಂದ ಸಭಾಂಗಣವನ್ನು ಧ್ವನಿನಿಯಂತ್ರಿತ ಕೊಠಡಿಯನ್ನಾಗಿ ಪರಿವರ್ತಿಸುವ ತನಕ ಸಭಾಂಗಣದಲ್ಲಿ ಧ್ವನಿವರ್ಧಕ ಉಪಯೋಗಿಸುವ ಕಾರ್ಯಗಳಿಗೆ ನೀಡಬಾರದೆಂಬ ಪದಾಧಿಕಾರಿಗಳ ಸಲಹೆಯನ್ನು ಸಭೆಯ ಮುಂದಿರಿಸಿ ಅವರ ಅನುಮೋದನೆ ಪಡೆಯಲಾಯಿತು. ತಕ್ಷಣಕ್ಕೆ ಕಿಟಕಿಗಳಿಗೆ ಧ್ವನಿ ಹವಾನಿಯಂತ್ರಣ ವ್ಯವಸ್ಥೆಯನ್ನು ಅಳವಡಿಸುವ ಬಗ್ಗೆ ಸೂಕ್ತ ಪ್ರಾಯೋಜಕರನ್ನು ಸಂಪರ್ಕಿಸಲು ಸಭೆ ಸೂಚಿಸಿತು.

ವ್ಯವಸ್ಥಾಪಕ ಕಾರ್ಯದರ್ಶಿ ಎಸ್.ವಿ. ಶ್ರೀನಿವಾಸರಾವ್ ಅವರ ವಂದನಾರ್ಪಣೆಯೊಡನೆ ಸಭೆ ಮುಕ್ತಾಯಗೊಂಡಿತು.

ಯಾರೂ ನಿನ್ನ ಮರೆತಿಲ್ಲ (ಎಂ.ವಿ.ಸೀ. ಕುರಿತ ಕವನ)

ನಿನ್ನ ಪ್ರತಿಮೆಯ ಇಟ್ಟಿದ್ದಾರೆ
ನಿನ್ನದೇ ಅಂಕಣದಲ್ಲಿ
ನಮ್ಮ ಮುಂದೆ, ನಿನ್ನ ಕುಬ್ಜಾಕಾರದ
ಪ್ರತಿಬಿಂಬ ಕಾಣಿಸೋಲ್ಲ



ರವಿ ಸುಬ್ರಹ್ಮಣ್ಯ ಅವರಿಗೆ ಅವರ ಸ್ವಗೃಹದಲ್ಲಿ ಸನ್ಮಾನ

ನಿನ್ನ ಕೀರ್ತಿಯ ಎತ್ತರ ಬಿತ್ತರವಾಗಿದೆ.
ನಿನ್ನ ಪ್ರೀತಿಯ ಗುರುಗಳ ಸಾನಿಧ್ಯ
ಅದರ ದೃಷ್ಟಿಯ ನೆರಳಲ್ಲಿ ನೆನಪಲ್ಲಿ
ಬೆಳೆದವ ನೀನು, ನೀ ಕಣ್ಮರೆಯಾಗಿ
ಇಪ್ಪತ್ತಾದರೂ ನಾವಿನ್ನ ಮರೆತಿಲ್ಲ
ಒಪ್ಪೊತ್ತೂ ಯಾವ್ಹೊತ್ತೂ
ಆದರೂ ಯಾರಿಗೂ ಸಿಕ್ಕಿಲ್ಲ
ಪುರುಸೊತ್ತು ಹಾಕಲು
ಕೆಲವು ಸುತ್ತು, ಅರ್ಥ ಮಾಡಿಕೊಳ್ಳಲು
ನಿನ್ನ ಸಾಹಿತ್ಯದ ವಿದ್ವತ್ತಿನ ಸಂಪತ್ತು

- ಭಾಸ್ಕರ್

೨೨-೦೩-೨೦೦೯ ಸೋಮವಾರ ಸಂಜೆ ೫-೩೦ : ತಿಮ್ಮಪ್ಪದಾಸ ಪ್ರಾಚೀನ ಹಸ್ತಪ್ರತಿ ಸಂಗ್ರಹಾಲಯದ ಉದ್ಘಾಟನೆ ಮತ್ತು ಎರಡು ಪುಸ್ತಕಗಳ ಬಿಡುಗಡೆ ಕಾರ್ಯಕ್ರಮ.

ಪ್ರತಿಷ್ಠಾನದ ಕಾರ್ಯದರ್ಶಿ ಡಾ. ನಾ. ಗೀತಾಚಾರ್ಯ ಪ್ರಾಸ್ತಾವಿಕವಾಗಿ ಮಾತನಾಡಿ ಹಸ್ತಪ್ರತಿ ಸಂಗ್ರಹಾಲಯದ ಬಗ್ಗೆ ಮಾಹಿತಿ ನೀಡಿದರು. ಡಾ. ಪಿ.ವಿ. ನಾರಾಯಣ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮಾಜಿ ಕೇಂದ್ರ ಸಚಿವ ಶ್ರೀ. ಎಂ.ವಿ. ರಾಜಶೇಖರನ್, ಗ್ರಂಥ ಬಿಡುಗಡೆ ಮಾಡಲು ಆಗಮಿಸಿದ್ದ ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ, ಅಧ್ಯಕ್ಷತೆ ವಹಿಸಲಿದ್ದ ನಾಡೋಜ ಜಿ. ನಾರಾಯಣ ಹಾಗೂ ಸಭಿಕರನ್ನು ಸ್ವಾಗತಿಸಿದರು. ಶ್ರೀ ಎಂ.ವಿ. ರಾಜಶೇಖರನ್ ಅವರು ಕೇಂದ್ರ ಮಂತ್ರಿಯಾಗಿದ್ದಾಗ ನೀಡಿದ್ದ ೫ ಲಕ್ಷ ರೂಪಾಯಿ ಅನುದಾನದಿಂದ ನಿರ್ಮಿತಗೊಂಡಿರುವ '**ತಿಮ್ಮಪ್ಪದಾಸ ಪ್ರಾಚೀನ ಹಸ್ತಪ್ರತಿ ಸಂಗ್ರಹಾಲಯ**'ದ ಉದ್ಘಾಟನೆಯನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಶ್ರೀ ರಾಜಶೇಖರನ್ ಅವರ ಆಪ್ತಮಿತ್ರ ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ ಗಳು ಹಸ್ತಪ್ರತಿಗಳ ಮಹತ್ವವನ್ನು ವಿವರಿಸಿದರು. ಸಂಗ್ರಹಣೆ, ಸಂರಕ್ಷಣೆಯ ಕಾರ್ಯವನ್ನು ಅತೀವ ಆಸಕ್ತಿ ಹಾಗೂ ಶ್ರದ್ಧೆಯಿಂದ ನಿರ್ವಹಿಸುತ್ತಿರುವ ಪ್ರತಿಷ್ಠಾನದ ಕಾರ್ಯಕ್ಷಮತೆಯನ್ನು ಪ್ರಶಂಸಿದರು. ಓಲೆಗರಿಗಳ ಸಂರಕ್ಷಣಾ ಕೊಠಡಿಗೆ ಹವಾನಿಯಂತ್ರಣ ಸೌಲಭ್ಯವನ್ನು ಅಳವಡಿಸುವ ಅಗತ್ಯವನ್ನು ಒತ್ತಿ ಹೇಳಿ ಅದಕ್ಕೆ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರು ಐದು ಲಕ್ಷ

ರೂಪಾಯಿ ಸಹಾಯಧನ ನೀಡಿ ಉಪಕರಿಸಬೇಕೆಂಬ ಬೇಡಿಕೆಯನ್ನು ಮಂಡಿಸಿದರು. ಇದಕ್ಕೆ ಸ್ಪಂದಿಸಿದ ಶ್ರೀ ರಾಜಶೇಖರನ್ ಅವರು ಐದು ಲಕ್ಷ ಹಣವನ್ನು ತಮ್ಮ ವಿಧಾನ ಪರಿಷತ್ ನಿಧಿಯಿಂದ ಬಿಡುಗಡೆಮಾಡುವ ಆಶ್ವಾಸನೆ ನೀಡಿದರು. ಇದನ್ನು ಅಲ್ಲಿ ನೆರೆದಿದ್ದ ಸಮಸ್ತ ಕನ್ನಡಪ್ರೇಮಿಗಳೂ ಗೌರವಾಭಿಮಾನದಿಂದ ಸ್ವಾಗತಿಸಿದರು.

ಶ್ರೀ ರಾಜಶೇಖರನ್ ಅವರು ಪ್ರತಿಷ್ಠಾನದ ಬಗ್ಗೆ ಇರಿಸಿಕೊಂಡಿರುವ ಗೌರವ ಹಾಗೂ ಪ್ರೀತಿಗೆ ಶ್ರೀ ಎಸ್.ವಿ. ಶ್ರೀನಿವಾಸರಾವ್‌ರವರು ಹಾರ್ದಿಕವಾಗಿ ಕೃತಜ್ಞತೆ ಸಲ್ಲಿಸಿ ಶುಭಾಶಯ ಕೋರಿದರು.



ತಿಮ್ಮಪ್ಪದಾಸ ಪ್ರಾಚೀನ ಹಸ್ತಪ್ರತಿ ಸಂಗ್ರಹಾಲಯದ ಉದ್ಘಾಟನೆ ಮತ್ತು ಪುಸ್ತಕಗಳ ಬಿಡುಗಡೆ ಕಾರ್ಯಕ್ರಮ

ಕೆಳಗಿನ ಸಭಾಂಗಣದಲ್ಲಿ ನಡೆದ ಮುಂದುವರಿದ ಕಾರ್ಯಕ್ರಮದಲ್ಲಿ ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀಗಳು, ಪ್ರತಿಷ್ಠಾನ ಸಂಪಾದಿಸಿ ಪ್ರಕಟಿಸಿರುವ **'ಕೆ.ವಿ. ರಾಘವಾಚಾರ್: ಜೀವನ – ಸಾಧನೆ : ಮತ್ತು 'ಕನ್ನಡದ ಶರಣ ಎಂ.ಆರ್. ಶ್ರೀ'** : ಶತಮಾನೋತ್ಸವ ವಿಚಾರಗೋಷ್ಠಿ ಲೇಖನ. ಸಂಕಲನ ಗ್ರಂಥಗಳನ್ನು ಬಿಡುಗಡೆಮಾಡಿ ಕೆ.ವಿ. ರಾಘವಾಚಾರ್ ಮತ್ತು ಎಂ.ಆರ್.ಶ್ರೀ. ಅವರ ಜೀವನ ಮತ್ತು ಸಾಧನೆಗಳ ಮುಖ್ಯಾಂಶಗಳನ್ನು ತಿಳಿಸಿದರು. ಈ ಮಹಾನ್ ವಿದ್ವಾಂಸರುಗಳು ತಮ್ಮ ಅನುಪಮ ಕೊಡುಗೆಗಳಿಂದಾಗಿ ಕನ್ನಡ ಸಾರಸ್ವತ ಲೋಕದಲ್ಲಿ ಚಿರಸ್ಮರಣೀಯ ವ್ಯಕ್ತಿಗಳಾಗಿ ಉಳಿದಿದ್ದಾರೆ ಎಂದು ಹೇಳಿದರು. ನಾಡೋಜ ಜಿ. ನಾರಾಯಣ ಅಧ್ಯಕ್ಷತೆ ವಹಿಸಿದ್ದರು. ಕೆ.ವಿ. ರಾಘವಾಚಾರ್ ಮತ್ತು ಎಂ.ಆರ್.ಶ್ರೀ. ಅವರೊಡನಿನ ಸಂಬಂಧದ ಕೆಲ ಸ್ವಾರಸ್ಯಕರ ವಿಷಯಗಳನ್ನು ನೆನಪು ಮಾಡಿಕೊಂಡರು. ಶ್ರೀ ಎಸ್.ವಿ.



ತಿಮ್ಮಪ್ಪದಾಸ ಪ್ರಾಚೀನ ಪ್ರಾಚೀನ ಹಸ್ತಪ್ರತಿ ಸಂಗ್ರಹಾಲಯದ ಉದ್ಘಾಟನೆ

ಶ್ರೀನಿವಾಸರಾವ್ ಅವರು ವೇದಿಕೆ ಮೇಲಿದ್ದ ಎಲ್ಲಾ ಸನ್ಮಾನ್ಯರುಗಳಿಗೆ ಪ್ರತಿಷ್ಠಾನದ ಪರವಾಗಿ ಹಾರ್ದಿಕ ಅಭಿನಂದನೆ ಹಾಗೂ ಕೃತಜ್ಞತೆ ಸಲ್ಲಿಸಿದರು.

ಎಂ.ವಿ.ಸೀ. ಶತಮಾನೋತ್ಸವ ಸಭೆ :

ತಾ॥ ೨೨-೦೩-೨೦೦೯ ಸಂಜೆ ೫-೦೦ ಗಂಟೆಗೆ: ಎಂ.ವಿ.ಸೀತಾರಾಮಯ್ಯ ಅವರ ಶತಮಾನೋತ್ಸವ ವರ್ಷವನ್ನಾಗಿ ದಿನಾಂಕ: ೦೯-೦೯-೨೦೦೯ ರಿಂದ ೦೯-೦೯-೨೦೧೦ರ ವರೆಗೆ ಇಡೀ ವರ್ಷ ಆಚರಿಸುವ ಬಗ್ಗೆ ವಿಚಾರ ವಿನಿಮಯ ಮಾಡಲು ಈ ಸಭೆಯನ್ನು ಕರೆಯಲಾಗಿತ್ತು. ಈ ಸಭೆಗೆ ಕಾರ್ಯಕಾರಿ ಸಮಿತಿಯ ಸದಸ್ಯರುಗಳಲ್ಲದೆ ನೂರಕ್ಕೂ ಹೆಚ್ಚು ಮಂದಿ ಅಭಿಮಾನಿಗಳು ಆಗಮಿಸಿದ್ದರು. ಸಭೆಯ ಮುಂದೆ ಗೌರವ ಕಾರ್ಯದರ್ಶಿ ಡಾ. ನಾ. ಗೀತಾಚಾರ್ಯರು ಎಂ.ವಿ.ಸಿ ಶತಮಾನೋತ್ಸವ ಆಚರಣೆ ಬಗ್ಗೆ ವಿವರಗಳನ್ನು ಮಂಡಿಸಿದರು. ಈ ಮಂಡಿಸಿದ ವಿಷಯಗಳನ್ನು ಪ್ರತ್ಯೇಕವಾಗಿ ಪತ್ರಮುಖೇನ ಸದಸ್ಯರುಗಳ ಗಮನಕ್ಕೆ ತರಲಾಗಿದೆ ಎಂದೂ ತಿಳಿಸಿದರು.

ಈ ಸಮಾಲೋಚನಾ ಸಭೆಯಲ್ಲಿ ಭಾಗವಹಿಸಿ ಸಲಹೆ ನೀಡಿದವರುಗಳು: ಪ್ರೊ. ಡಿ. ಲಿಂಗಯ್ಯ, ಪ್ರೊ. ಮಧುಸೂದನ್, ಪ್ರೊ. ನಾರಾಯಣಮ್ಮ, ಶ್ರೀ ಅಶ್ವತ್ಥನಾರಾಯಣ, ಶ್ರೀ ಭಗವಾನ್, ಡಾ. ಲಲಿತಮ್ಮ, ಶ್ರೀ ಹೆಚ್.ಎಲ್.ಎನ್. ರಾವ್, ಶ್ರೀ ಎಂ.ವಿ. ಸತ್ಯನಾರಾಯಣ, ಶ್ರೀ ವೆಂಕಟೇಶ್, ಶ್ರೀ ಹರಿಹರ ಶ್ರೀನಿವಾಸರಾವ್, ಎಂ.ಎಸ್.ಭಾಸ್ಕರ್, ಎಂ.ನರಸಿಂಹ, ಚಿ. ಶ್ರೀನಾಥಶಾಸ್ತ್ರೀ ಮುಂತಾದವರು

ಬಿ.ಎಂ.ಶ್ರೀ ಪ್ರತಿಷ್ಠಾನದ ಸಹಯೋಗದೊಡನೆ ನಡೆದಿರುವ ಕಾರ್ಯಕ್ರಮಗಳು

ತಾ॥ ೨೦-೦೧-೦೯ ಮಂಗಳವಾರ ಸಂಜೆ ೫-೩೦ :
ಆಂಡಾಳ್ ಕನ್ನಡ ತಿರುಪ್ಪಾವೆ ಮತ್ತು ಭಗವದ್ಗೀತೆ
'ಪಾರಾಂಗಣ ಗೀತಾ' ಪುಸ್ತಕ ಬಿಡುಗಡೆ:

'ನಾರಾಯಣಶರ್ಮ ಸಂಸ್ಕೃತಿ ಕೇಂದ್ರ' ಬೆಂಗಳೂರು ಜಿಲ್ಲೆ, ಏರ್ಪಡಿಸಿದ್ದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರೊ. ಜಿ. ಅಶ್ವತ್ಥನಾರಾಯಣ ವಹಿಸಿದ್ದರು. ಡಾ. ನಾ. ಗೀತಾಚಾರ್ಯರು ಕನ್ನಡದಲ್ಲಿ ರಚಿಸಿರುವ 'ಕನ್ನಡ ತಿರುಪ್ಪಾವೆ' ಗ್ರಂಥವನ್ನು ಡಾ. ವಿಜಯಾಸುಬ್ಬರಾಜ್, ತ.ಶ್ರೀ.ನಾ. ಮೂರ್ತಿ ಅವರ 'ಪಾರಾಯಣ ಗೀತಾ' ಕೃತಿಯನ್ನು ವೇ॥ ಬ್ರ॥ ಶ್ರೀ ಸುಬ್ರಾಯಶರ್ಮ ಬಿಡುಗಡೆ ಮಾಡಿದರು. ಡಾ. ವಿಜಯಾಸುಬ್ಬರಾಜ್ ಅವರು 'ಕನ್ನಡ ತಿರುಪ್ಪಾವೆ' ಬಗ್ಗೆ ಮಾತನಾಡಿ ಲೇಖಕ ಗೀತಾಚಾರ್ಯರು ಪ್ರಾಚೀನ ತಮಿಳುಕೃತಿಯನ್ನು ಹಳಗನ್ನಡದಲ್ಲಿ ಅನುವಾದಿಸಿ ಮೌಲಿಕ ಸಾಹಿತ್ಯ ಕೃತಿಯನ್ನಾಗಿಸಿದ್ದಾರೆ. ಅರ್ಥ, ತಾತ್ಪರ್ಯ ನೀಡಿ ಸುಲಭವಾಗಿ ಅರ್ಥವಾಗವಂತೆ ಮಾಡಿರುವುದು ಈ ಕೃತಿಯ ಉಪಯುಕ್ತತೆಯನ್ನು ಹೆಚ್ಚಿಸಿದೆ ಎಂದರು. ಖ್ಯಾತ ಸಂಸ್ಕೃತ ವಿದ್ವಾಂಸರಾದ ಶ್ರೀ ಕೆ.ಜಿ. ಸುಬ್ರಾಯಶರ್ಮ 'ಪಾರಾಯಣ ಗೀತಾ'ವನ್ನು ಬಹುಉಪಯುಕ್ತ ಗ್ರಂಥವೆಂದು ಶ್ಲಾಘಿಸಿದರು. ಸುಲಭವಾಗಿ ಪಾರಾಯಣ ಮಾಡಬಹುದಾದ ಈ ಕೃತಿ ಜನಪ್ರಿಯಗೊಳ್ಳುವುದರಲ್ಲಿ ಅನುಮಾನವಿಲ್ಲ ಎಂದರು. ಶ್ರೀ ವಾದಿರಾಜ್ ಕಾರ್ಯಕ್ರಮದ ನಿರೂಪಣೆ ಮಾಡಿದರು.

ತಾ॥ ೩೧-೦೧-೨೦೦೯ ಶನಿವಾರ ಸಂಜೆ ೪-೩೦: ದ.ರಾ. ಬೇಂದ್ರೆ ಕಾವ್ಯಕೂಟ ಆಶ್ರಯದಲ್ಲಿ ದ.ರಾ. ಬೇಂದ್ರೆಯವರ ೧೧೩ನೇಯ ಹುಟ್ಟುಹಬ್ಬ ಆಚರಣೆ: ಹಾಗೂ ಬೇಂದ್ರೆ ಗೀತಗಾಯನ, 'ನಾದಲೀಲೆಯ ಭಾವಲೀಲೆ' ಕೃತಿ ಬಿಡುಗಡೆ, ಸನ್ಮಾನ ಹಾಗೂ ಬಹುಮಾನ ವಿತರಣೆ ಕಾರ್ಯಕ್ರಮ

ಈ ಕಾರ್ಯಕ್ರಮಗಳನ್ನು ಹಿರಿಯ ಗಾಂಧಿವಾದಿ ಶ್ರೀ ಹಾರನಹಳ್ಳಿ ರಾಮಸ್ವಾಮಿ ಉದ್ಘಾಟಿಸಿದರು, ಡಾ. ಪಿ.ವಿ. ನಾರಾಯಣ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಶ್ರೀ. ಶ್ರ ದೇ ಪಾರ್ಶ್ವನಾಥ್, ಡಾ. ಜಿ. ಕೃಷ್ಣಪ್ಪ, ಡಾ. ಕೆ.ಬಿ. ಲೋಕೇಶ್ವರಪ್ಪ ಆಗಮಿಸಿದ್ದರು. 'ನಾದಲೀಲೆಯ ಭಾವಲೀಲೆ' ಕೃತಿಯನ್ನು ಶ್ರೀ ಶ್ರ.ದೇ. ಪಾರ್ಶ್ವನಾಥ್ ಬಿಡುಗಡೆ ಮಾಡಿದರು. ಡಾ. ಜಿ. ಕೃಷ್ಣಪ್ಪ ಅವರು ಸ್ಪರ್ಧಾವಿಜೇತರುಗಳಿಗೆ ಬಹುಮಾನ ವಿತರಿಸಿದರು.

ಬಹುಮಾನ ವಿಜೇತರು: ಮೊದಲ ಬಹುಮಾನ: ಕು॥ ಜೆ.ಎಸ್. ಹೇಮಾವತಿ; ೨ನೇ ಬಹುಮಾನ ಕು॥ ಅರ್ಚನಾ ರೇವಣ್ಣಸಿದ್ಧಗಂಗಾ; ೩ನೇ ಬಹುಮಾನ ವಿಜೇತರು ಶ್ರೀ ಎಂ.ಬಿ. ಗಿರೀಶ್

ತಾ॥ ೨೨-೦೨-೨೦೦೯: ರಾ. ನಂ.ಬಳಗ, ಕನ್ನಡ ಗೆಳೆಯರ ಬಳಗ: "ಹೊಯ್ಸಳ ಕರ್ನಾಟಕರು: ನೆಲೆ-ಬೆಲೆ ಚಿಂತನಗೋಷ್ಠಿ"

ಶ್ರೀ ಹಾರ್ನಳ್ಳಿ ರಾಮಸ್ವಾಮಿ ಕಾರ್ಯಕ್ರಮ ಉದ್ಘಾಟಿಸಿದರು. ನಾಡೋಜ ಪ್ರೊ. ಜಿ. ವೆಂಕಟಸುಬ್ಬಯ್ಯ ಅಧ್ಯಕ್ಷತೆ ವಹಿಸಿದ್ದರು. ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀಗಳು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. 'ಹೊಯ್ಸಳ ಕರ್ನಾಟಕದ ಐತಿಹಾಸಿಕ ನೆಲೆ' ವಿಷಯ ಕುರಿತು ಡಾ. ಎಚ್.ಎಸ್. ಗೋಪಾಲರಾವ್, 'ಸಾಹಿತ್ಯ-ಸಂಸ್ಕೃತಿಗೆ ಹೊಯ್ಸಳ ಕರ್ನಾಟಕದ ಕೊಡುಗೆ' ಬಗ್ಗೆ ಡಾ. ಆರ್. ಶೇಷಶಾಸ್ತ್ರೀ ವಿಷಯ ಮಂಡಿಸಿದರು. ಶ್ರೀ.ರಾ.ನಂ. ಚಂದ್ರಶೇಖರ್ ಕಾರ್ಯಕ್ರಮ ನಿರೂಪಿಸಿದರು.

ತಾ॥ ೨೦-೦೨-೦೯ ಸ್ನೇಹಕೂಟ ಸಾಂಸ್ಕೃತಿಕ ವೇದಿಕೆ ಆಯೋಜಿಸಿದ್ದ ಕಾರ್ಯಕ್ರಮ: ಪ್ರೊ॥ ಸುಗುಣಾಬಾಯಿ ಅವರ 'ಸಮನ್ವಯ' ಪುಸ್ತಕ ಬಿಡುಗಡೆ ಸಮಾರಂಭ

ಶಿಕ್ಷಣತಜ್ಞ, ಡಾ. ಸತ್ಯಧ್ಯಾನ ಜೈನಾಪೂರ ಅವರು ಅಧ್ಯಕ್ಷತೆ ವಹಿಸಿದ್ದರು. ಕೃತಿ ಕುರಿತು ಡಾ. ವಿಜಯಸುಬ್ಬರಾಜ್ ಮಾತನಾಡಿದರು. ಪ್ರಾಸ್ತಾವಿಕವಾಗಿ ಡಾ. ಕೆ. ರಮಾನಂದ ಅವರು ಮಾತನಾಡಿದರು.

ತಾ॥ ೦೪-೦೨-೦೯ ಬುಧವಾರ ಸಂಜೆ ೫-೪೫ 'ಕನ್ನಡ ಗೆಳೆಯರ ಬಳಗ' ಕನ್ನಡ ಶ್ರೀ ಸಾಮಾನ್ಯರ ಕೂಟದ ಸಹಯೋಗದಲ್ಲಿ '೨೦೦೮ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಶ್ರೀ ಶ್ರೀನಿವಾಸವೈದ್ಯ ಅವರಿಗೆ ಅಭಿನಂದನೆ ಕಾರ್ಯಕ್ರಮ.

ಪ್ರೊ. ಹೆಚ್.ಕೆ. ರಾಮಚಂದ್ರಮೂರ್ತಿ ಅಧ್ಯಕ್ಷತೆ ವಹಿಸಿದ್ದರು, ಮುಖ್ಯ ಅತಿಥಿಗಳಾಗಿ ಪ್ರೊ. ಎಂ.ಎಚ್. ಕೃಷ್ಣಯ್ಯ, ಡಾ. ಪಿ.ವಿ. ನಾರಾಯಣ; ಕೃತಿಯ ವೈಶಿಷ್ಟ್ಯತೆ ಬಗ್ಗೆ ಸುದೀರ್ಘ ವಿವರಣೆ ನೀಡಿ ಲೇಖಕರನ್ನು ಅಭಿನಂದಿಸಿದರು. ಶ್ರೀ.ರಾ.ನಂ. ಚಂದ್ರಶೇಖರ್ ಕಾರ್ಯಕ್ರಮ ನಿರೂಪಿಸಿದರು. ಶ್ರೀ ಶ್ರ.ದೇ. ಪಾರ್ಶ್ವನಾಥ ಸ್ವಾಗತಿಸಿದರು.

ಅಭಿನಂದನೆ ಸ್ವೀಕರಿಸಿದ ಶ್ರೀ ಶ್ರೀನಿವಾಸವೈದ್ಯ ಕೃತಿಯ ರಚನೆಗೆ ಅನುಭವಗಳೇ ಹಿನ್ನೆಲೆ ಎಂದು ಕಥಾ ರಚನೆ ಹಾಗೂ ಬೆಳವಣಿಗೆ ಬಗ್ಗೆ ಕೆಲವು ಮಾಹಿತಿ ನೀಡಿ, ಕಾರ್ಯಕ್ರಮ ಆಯೋಜಿಸಿದ ಮಿತ್ರರಿಗೆ ವಂದನೆ ಸಲ್ಲಿಸಿದರು.

೩೧-೦೩-೦೯ ಮಂಗಳವಾರ ಸಂಜೆ ೫-೩೦ ಡಿ.ವಿ.ಜಿ. ದತ್ತಿ ಕಾರ್ಯಕ್ರಮ: ಮತ್ತು ಸಿರಿಸಂಗೀತ

ಡಾ. ನಾ. ಗೀತಾಚಾರ್ಯರ ಪ್ರಸ್ತಾವಿಕ ಮಾತುಗಳಲ್ಲಿ ಅವರನ್ನು ಸ್ಮರಿಸಿದರು. ಡಾ. ಪಿ.ವಿ. ನಾರಾಯಣ ಅತಿಥಿಗಳನ್ನು ಹಾಗೂ ಸಭಿಕರನ್ನು, ಸ್ವಾಗತಿಸಿದರು. ಶ್ರೀ ಎಸ್.ವಿ. ಶ್ರೀನಿವಾಸರಾವ್ ಅವರು ಅತಿಥಿಗಳ ಪರಿಚಯವನ್ನು ಮಾಡಿದರು.

ನಿವೃತ್ತ ಐ.ಟಿ.ಐ (I.T.I) ಇಂಜಿನಿಯರ್ ಶ್ರೀ ಜಿ.ಎಸ್. ಸತ್ಯಮೂರ್ತಿ ಅವರು ಡಿ.ವಿ.ಜಿ.ಯವರ ಜೀವನ-ಸಾಧನೆಯ ಮೇಲೆ 'ಕನ್ನಡದ ಅಶ್ವತ್ಥ ಡಿ.ವಿ.ಜಿ.' ದತ್ತಿ ಉಪನ್ಯಾಸ ನೀಡಿದರು. ಇದರ ನಂತರ ಡಾ. ರೋಹಿಣಿ ಮೋಹನ್ ಅವರು ಸಿರಿಸಂಗೀತದಲ್ಲಿ ಸುಶ್ರಾವ್ಯವಾಗಿ ಡಿ.ವಿ.ಜಿ. ಅವರ ಗೀತಗಾಯನ ಕಾರ್ಯಕ್ರಮ ನಡೆಸಿಕೊಟ್ಟರು. ನಾಡೋಜ. ಜಿ. ನಾರಾಯಣ ಅಧ್ಯಕ್ಷತೆ ವಹಿಸಿದ್ದರು, ಶ್ರೀ ಜಿ. ಅಶ್ವತ್ಥನಾರಾಯಣ ವಂದನಾರ್ಪಣೆ ಮಾಡಿದರು. ■

ದಾನಿಗಳು

೧. ಪ್ರತಿಷ್ಠಾನಕ್ಕೆ ದಾನ

೧)	ಪ್ರೊ॥ ಅ.ರಾ. ಮಿತ್ರ, ಬೆಂಗಳೂರು	೨೦೦-೦೦
೨)	ಎಸ್.ಟಿ. ರಾಧಾಕೃಷ್ಣ, ಬೆಂಗಳೂರು	೨೦೦-೦೦
೩)	ಜಿ.ಎಸ್. ಸತ್ಯಮೂರ್ತಿ, ಬೆಂಗಳೂರು	೫೦೧-೦೦

೨. ಗ್ರಂಥದಾನ

೧) ಹೆಚ್.ಆರ್. ಶಕುಂತಳಾ, ಬೆಂಗಳೂರು ೫ ಗ್ರಂಥಗಳು

೩. ಎಂ.ವಿ.ಸೀ. ಶತಮಾನೋತ್ಸವ ನಿಧಿಗೆ ದಾನ :

೧)	ಪ್ರೊ॥ ಎಂ.ವಿ. ಸತ್ಯನಾರಾಯಣ, ಬೆಂಗಳೂರು	೨,೦೦೧-೦೦
೨)	ಡಾ॥ ಎಂ.ಎಲ್. ಲಲಿತಮ್ಮ, ಬೆಂಗಳೂರು	೧,೦೦೦-೦೦

ಈ ಮೇಲ್ಕಂಡ ದಾನಿಗಳಿಗೆ ಪ್ರತಿಷ್ಠಾನ ಹೃತ್ಪೂರ್ವಕವಾದ ಕೃತಜ್ಞತೆಗಳನ್ನು ಅರ್ಪಿಸುತ್ತದೆ.



ತಾ॥ ೨೨-೦೩-೦೯ರಂದು ಸ್ವಯಂ ನಿವೃತ್ತಿ ಪಡೆದ ಪ್ರತಿಷ್ಠಾನದ ನೌಕರರಾದ ಶ್ರೀಮತಿ ರಾಜಲಕ್ಷ್ಮೀ ಅವರಿಗೆ ಬೀಳ್ಕೊಡುಗೆ ನೀಡಲಾಯಿತು.

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದಿಂದ ಪಡೆದ ಎಂ.ಫಿಲ್ ಪದವಿಗಳು

2008ನೇ ಸಾಲಿನಲ್ಲಿ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಎಂ.ವಿ.ಸೀ. ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾನಿಲಯದಿಂದ ಕನ್ನಡ ಎಂ.ಫಿಲ್ ಪದವಿ ಪಡೆದ ವಿದ್ಯಾರ್ಥಿಗಳ ಪಟ್ಟಿ.

ಸಾಹಿತ್ಯ ಅಧ್ಯಯನ ವಿಭಾಗ

ಕ್ರ.ಸಂ.	ವಿದ್ಯಾರ್ಥಿ ಹೆಸರು	ವಿಷಯ	ಮಾರ್ಗದರ್ಶಕರು	ಅಂಕಗಳು	ದರ್ಜೆ
೧.	ಗಂಗಾಂಬಿಕೆ ಎಸ್.	ಬಿ.ಎಂ.ಶ್ರೀ. ಅವರ ಇಂಗ್ಲೀಷ್ ಗೀತಗಳು ಒಂದು ತೌಲನಿಕ ಅಧ್ಯಯನ	ಡಾ. ಎಚ್.ಎಸ್.ಹರಿಶಂಕರ್	೩೩೨	ಪ್ರಥಮ
೨.	ರೂಪ ಎನ್.	ಬಿ.ಎಂ.ಶ್ರೀ.ಯವರ ನಾಟಕಗಳ ಸ್ವರೂಪ ಒಂದು ಅಧ್ಯಯನ	ಡಾ. ಎಚ್.ಎಸ್. ಹರಿಶಂಕರ್	೩೦೫	-;-
೩.	ಸಂಪದ ಸಿ.ಕೆರಿಮನಿ	ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳ ಪದಗಳು	ಪ್ರೊ. ಡಿ. ಲಿಂಗಯ್ಯ	೩೨೩	-;-
೪.	ಭಾಗ್ಯ ಎ.ಎನ್.	ಪು.ತಿ.ನ. ಪ್ರಬಂಧಗಳಲ್ಲಿ ಶ್ರೀವೈಷ್ಣವ ತತ್ವ	ಡಾ. ಕೆ.ಆರ್. ಗಣೇಶ್	೩೦೫	-;-
೫.	ವಜ್ರೇಶ್ವರಿ ಎಸ್.ಮೂರ್ತಿ	ಕನಕದಾಸರ ರಾಮಧಾನ್ಯ ಚರಿತೆ: ಒಂದು ಸಂಘರ್ಷದ ಸ್ವರೂಪ ಮತ್ತು ಚಿಂತನೆ	ಡಾ. ಕೆ.ವಿ. ಶ್ರೀನಿವಾಸಮೂರ್ತಿ	೩೦೮	-;-
೬.	ಅಮರನಾಥ್ ಎನ್.	ಕುವೆಂಪು ಅವರ 'ಪಕ್ಷಿಕಾಶಿ' – ಕವನಸಂಕಲನ ಒಂದು ಅಧ್ಯಯನ	ಡಾ. ಪಿ.ವಿ. ನಾರಾಯಣ	೩೧೩	-;-
೭.	ಶಿವಕುಮಾರ್ ಬಿ.ಎಸ್.	ಮಲೆಮಾದೇಶ್ವರ ಸಾಂಸ್ಕೃತಿಕ ನಿಲುವುಗಳು	ಪ್ರೊ.ಡಿ. ಲಿಂಗಯ್ಯ	೩೦೬	-;-
೮.	ಇಂದುಮತಿ ಎಸ್.	ಹರಿದಾಸ ಸಾಹಿತ್ಯದಲ್ಲಿ ವ್ಯಾಜ ಸ್ತುತಿಗಳು	ಪ್ರೊ. ಜಿ. ಅಶ್ವತ್ಥನಾರಾಯಣ	೩೧೦	-;-

ಹಸ್ತಪ್ರತಿ ಅಧ್ಯಯನ ವಿಭಾಗ

ಕ್ರ.ಸಂ.	ವಿದ್ಯಾರ್ಥಿ ಹೆಸರು	ವಿಷಯ	ಮಾರ್ಗದರ್ಶಕರು	ಅಂಕಗಳು	ದರ್ಜೆ
೯.	ಶೀಲಾ ಕೆ.ಎಸ್.	ಸರ್ವಜ್ಞ ವಚನಗಳ ಸಂಪಾದನೆ – ಒಂದು ಅಧ್ಯಯನ	ಡಾ. ಕೆ.ಆರ್. ಗಣೇಶ್	೩೩೬	-;-
೧೦.	ಧನಂಜಯ ಜಿ.ಕೆ.	ಹಸ್ತಪ್ರತಿಗಳ ಕೈಬರಹಗಳ ಅಧ್ಯಯನ (ಗ್ರಾಫಾಲಜಿಯ ಹಿನ್ನೆಲೆಯಲ್ಲಿ)	ಪ್ರೊ. ನಾ. ಗೀತಾಚಾರ್ಯ	೩೧೪	-;-
೧೧.	ರಾಮಚಂದ್ರಪ್ಪ ಜಿ.ಹೆಚ್.	ಕನ್ನಡ ಗ್ರಂಥಸಂಪಾದನೆಗೆ ಎಂ.ವಿ. ಸೀತಾರಾಮಯ್ಯನವರ ಕೊಡುಗೆ	ಡಾ. ಆರ್. ಲಕ್ಷ್ಮೀನಾರಾಯಣ್	೩೦೭	-;-
೧೨.	ರೇಖಾ ಎಂ.	ಕುಮಾರವ್ಯಾಸಭಾರತದ ಆದಿಪರ್ವದಲ್ಲಿ ಪಾಠಾಂತರ ವಿಶ್ಲೇಷಣೆ	ಡಾ. ಕೆ.ವಿ. ಶ್ರೀನಿವಾಸಮೂರ್ತಿ	೩೦೨	-;-
೧೩.	ವರದರಾಜು ಎಸ್.ಡಿ.	ಕನ್ನಡ ಸಂಶೋಧನ ಗ್ರಂಥಗಳು ಒಂದು ಅಧ್ಯಯನ	ಪ್ರೊ. ಕೆ.ಎಸ್. ಮಧುಸೂದನ	೩೦೯	-;-
೧೪.	ಶಾಂತಮ್ಮ ಆರ್.	ಹರಿದಾಸ ಸಾಹಿತ್ಯಕ್ಕೆ ಶ್ರೀತುಳಸಿ ರಾಮದಾಸರ ಕೊಡುಗೆ ಒಂದು ಅಧ್ಯಯನ	ಡಾ. ಕೆ.ಎಲ್. ಗೋಪಾಲಕೃಷ್ಣಯ್ಯ	೨೯೬	ದ್ವಿತೀಯ
೧೫.	ಗೀತಾ ಆರ್.	ಕುಮಾರವ್ಯಾಸನ ಉದ್ಯೋಗಪರ್ವದ ಗ್ರಂಥಸಂಪಾದನೆಗಳ ಸಮೀಕ್ಷೆ	ಡಾ. ಕೆ.ಎಸ್. ಮಧುಸೂದನ	೩೧೫	ಪ್ರಥಮ
೧೬.	ಇಂದ್ರೇಶ್ ಡಿ.ಎಸ್.	ಕನ್ನಡ ಕಾವ್ಯಗಳಲ್ಲಿ ಬಾಹುಬಲಿ – ಒಂದು ಅಧ್ಯಯನ	ಪ್ರೊ. ಹೆಚ್.ವಿ. ಶ್ರೀನಿವಾಸಶರ್ಮ	೩೦೮	-;-
೧೭.	ಸುರೇಶ್ ಕೆ.	ಮೈಸೂರು ವಿಶ್ವವಿದ್ಯಾನಿಲಯ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಗಳು ಒಂದು ಅಧ್ಯಯನ	ಪ್ರೊ. ಜಿ. ಅಶ್ವತ್ಥನಾರಾಯಣ	೩೨೩	-;-

ಭಾಷಾಧ್ಯಯನ ವಿಭಾಗ

೧೮.	ಶಿಲ್ಪ ಹೆಚ್.ಜಿ.	ಕುವೆಂಪು ಕಾದಂಬರಿಗಳಲ್ಲಿ ಭಾಷೆ ಮತ್ತು ಸಾಮಾಜಿಕ ಸಂಬಂಧಗಳು	ಪ್ರೊ. ಎಂ.ಎಚ್. ಕೃಷ್ಣಯ್ಯ	೩೨೧	–;–
೧೯.	ರಾಮಮೂರ್ತಿ ಆರ್.	ಶಿವರಾಮ ಕಾರಂತರ 'ಮರಳಿ ಮಣ್ಣಿಗೆ' ಸಾಂಸ್ಕೃತಿಕ ಅಧ್ಯಯನ	ಡಾ.ಎಚ್.ಎಸ್. ರಾಘವೇಂದ್ರರಾವ್	೩೦೫	–;–
೨೦.	ಅಂಬರೀಶ್ ವಿ.	ತೇಜಸ್ವಿಯವರ ಕಾದಂಬರಿಗಳ ಭಾಷೆ : ಸಾಂಸ್ಕೃತಿಕ ಒಳನೋಟಗಳು	ಡಾ. ಪಿ.ವಿ. ನಾರಾಯಣ	೩೪೭	–;–
೨೧.	ಮಂಜುಳಾ ಎಂ.	ಸಿದ್ಧಲಿಂಗಯ್ಯನವರ ಕಾವ್ಯಗಳಲ್ಲಿ ಭಾಷೆ ಒಂದು ಅಧ್ಯಯನ	ಡಾ. ಕೆ.ಪಿ. ಭಟ್	೩೦೮	–;–
೨೨.	ಲಲಿತಾಬಾಯಿ ಹೆಚ್.	ಬೇಂದ್ರೆ ಅವರ ನಾಟಕಗಳ ಭಾಷೆ ಒಂದು ಅಧ್ಯಯನ	ಡಾ. ಎಚ್.ಎಸ್. ರಾಘವೇಂದ್ರರಾವ್	೩೨೮	–;–
೨೩.	ಮಮತ ಎಲ್.ಆಲಮೇಲ	ಮಾಸ್ತಿಯವರ ಕೆಲವು ಕಥೆಗಳಲ್ಲಿ ಭಾಷೆ ಮತ್ತು ಸಾಮಾಜಿಕ ಚಿತ್ರಣ	ಪ್ರೊ. ಎಂ.ಎಚ್. ಕೃಷ್ಣಯ್ಯ	೩೧೫	–;–
೨೪.	ಸಿದ್ದಲಿಂಗಪ್ಪಾ ಎಸ್.ದೇಶಮುಖ್	ಪ್ರೌಢಾಶಾಲಾ ಮಕ್ಕಳ ಕನ್ನಡದ ಬಳಕೆಯಲ್ಲಿ ಕಾಗುಣಿತ ದೋಷಗಳು	ಡಾ. ಕೆ.ಪಿ. ಭಟ್	೩೧೪	–;–
೨೫.	ಮಲ್ಲಿಕಾರ್ಜುನಯ್ಯ	ಕುವೆಂಪುರವರ ನಾಲ್ಕು ನಾಟಕಗಳಲ್ಲಿ ಭಾಷೆ ಮತ್ತು ಮಾನವೀಯ ಮೌಲ್ಯಚಿಂತನೆ	ಡಾ. ವಿಜಯ ಸುಬ್ಬರಾಜ್	೩೦೮	–;–

2006–07ನೇ ಸಾಲಿನ ವಿದ್ಯಾರ್ಥಿಗಳು

೦೧.	ದೇವರಾಜ ಬಿ.ಕೆ.	ಹಸ್ತಪ್ರತಿಶಾಸ್ತ್ರಕ್ಕೆ ಬಿ.ಎಂ.ಶ್ರೀ. ಪ್ರತಿಷ್ಠಾನದ ಕೊಡುಗೆ – ಒಂದು ಅಧ್ಯಯನ	ಡಾ. ನಾ. ಗೀತಾಚಾರ್ಯ	೩೨೭	–;–
೦೨.	ಸುಧೀರ್ ಕೆ.	ಕನ್ನಡ ಗ್ರಂಥ ಸಂಪಾದನ ಶಾಸ್ತ್ರಕ್ಕೆ ತೀ.ನಂ.ಶ್ರೀಕಂಠಯ್ಯನವರ ಕೊಡುಗೆ	ಡಾ. ನಾ. ಗೀತಾಚಾರ್ಯ	೩೨೫	–;–
೦೩.	ಪುಟ್ಟೇಶ್ ಸಿ.	ಆಯ್ದ ಕೆಲವು ರೂಪಾಂತರ ನಾಟಕಗಳು ಒಂದು ಅವಲೋಕನ	ಡಾ. ಕೆ.ವಿ. ಶ್ರೀನಿವಾಸಮೂರ್ತಿ	೩೦೮	–;–

ಸಾದರಸ್ವೀಕಾರ

ಕನ್ನಡ ಶಾಸ್ತ್ರ ಸಂಕಥನ ಡಾ. ಕೊಟ್ರಸ್ವಾಮಿ ಎ.ಎಂ.: (ಪಿಎಚ್.ಡಿ. ಅಧ್ಯಯನ ಗ್ರಂಥ) ಪ್ರ: ಪವಿತ್ರ ಎಂಟರ್ ಪ್ರೈಸಸ್, ನಂ.೪೯೧, ಸುಂಕದ ಕಟ್ಟೆ, ಮಾಗಡಿ ಮುಖ್ಯರಸ್ತೆ, ವಿಶ್ವನೀಡಂ ಅಂಚೆ, ಬೆಂಗಳೂರು. ಪುಟ : xii + ೨೫೪, ಬೆಲೆ : ೧೫೦/–

ತೇರನೇರಿದ ಚೆನ್ನಿ : ಲೇ: ವಿದ್ಯಾಧರ ಮುತಾಲಿಕ್ ದೇಸಾಯಿ (ಪ್ರ: ಮುಂಬೆಳಕು ಕನ್ನಡ ಬಳಗ) ಪುಟ : ೯೪, ಬೆಲೆ : ೯೦/–

ವಾಸ್ತವ : ಲೇ: ರತ್ನಮೂರ್ತಿ, ಪ್ರ: ಮಂಗಳ ಪ್ರಕಾಶನ, ಪುಟ: ೧೩೦, ಬೆಲೆ : ೯೦/–

ವಿಶ್ವಾರ್ಚನೆ : ಲೇ: ರತ್ನಮೂರ್ತಿ ಪ್ರ: ಮಂಗಳ ಪ್ರಕಾಶನ, ಪುಟ: ೧೩೦ ಬೆಲೆ : ೫೦/–

ಒಂದು ತೋಟದ ಕಥೆ ಮತ್ತು ಇತರ ನಾಟಕಗಳು: ಲೇ: ರತ್ನಮೂರ್ತಿ ಪ್ರ: ಅಕ್ಷಯ ಪ್ರಕಾಶನ, ಪುಟ : ೧೫೨, ಬೆಲೆ : ೧೦೦/–

ವಿಕಲ ಚೇತನ : ಲೇ: ರತ್ನಮೂರ್ತಿ, ಪ್ರ: ಅಕ್ಷಯ ಪ್ರಕಾಶನ ಪುಟ : ೨೬೬, ಬೆಲೆ : ೧೫೦/–

ಕರಾವಳಿ ಜಾನಪದ : ಸಂ: ಪ್ರೊ.ಎ.ವಿ. ನಾವಡ, ಪ್ರ: ಪ್ರಕಾಶನ ಸ್ವಾಗತ ಸಮಿತಿ, ಅ.ಬಾ. ೭೪ನೆಯ ಕ.ಸಾ. ಸಮ್ಮೇಳ ಉಡುಪಿ, ಪುಟ: ೪೧೬, ಬೆಲೆ : ೧೬೫, ಪ್ರಕಟಣೆ – ೨೦೦೭

ಅರವಿನ ಕುರುಹು: ಸಂ: ಪ್ರೊ. ಎ.ವಿ. ನಾವಡ, ಪ್ರ: ಶ್ರೀರಾಜೇಂದ್ರ ಪ್ರಿಂಟರ್ಸ್ ಮತ್ತು ಪಬ್ಲಿಕೇಷನ್ಸ್, ಪುಟ : ೩೦೪, ಬೆಲೆ : ೧೭೫/–

ಜಿಜ್ಞಾಸೆ : ಲೇ: ಡಾ॥ ಪ್ರಮೀಳಾಮಾಧವ್, ಪ್ರ: ಸಂಪಾ ಪ್ರಕಾಶನ, ಪುಟ : ೧೦೮, ಬೆಲೆ : ೮೦/– ಪ್ರಕಟಣೆ: ೨೦೦೮

ಹಸಿರುಸೂರ್ಯ: ಲೇ: ಲಕ್ಷ್ಮಿಗೊಂಡನಹಳ್ಳಿ, ಪ್ರ: ವೆಂಕಟೇಶ್ ಅನಿಕೇತನ ಪ್ರಕಾಶನ, ತುಮಕೂರು, ಪುಟ : ೮೮, ಬೆಲೆ : ೬೦/–, ಪ್ರಕಟಣೆ: ೨೦೦೮

ಆಕಾಶ ಬುಟ್ಟಿ ಮತ್ತು ವೀಣೆ : ಲೇ: ಕೆ.ಎನ್. ಭಗವಾನ್, (ಸುಮುಖ ಪ್ರಕಾಶನ), ಪುಟ : ೧೪೪, ಬೆಲೆ : ೭೦/–, ಪ್ರಕಟಣೆ: ೨೦೦೬

ಅಭಿನಂದನೆಗಳು

- **ನಾಡೋಜ ಪ್ರಶಸ್ತಿ :** (೨೦೦೮) ಹಂಪಿ ಕನ್ನಡ ವಿಶ್ವವಿದ್ಯಾಲಯ ದಿನಾಂಕ: ೨೯-೧೨-೦೮ರಂದು ಪ್ರೊ. ಎಲ್. ಬಸವರಾಜು; ಡಾ. ಯು.ಆರ್. ಅನಂತಮೂರ್ತಿ, ತೊಗಲು ಬೊಂಬೆ ಕಲಾವಿದ ಯಡ್ರಾಮನಹಳ್ಳಿ ದೊಡ್ಡಭರಮಪ್ಪ, ಪ್ರೊ. ಕಮಲಾಹಂಪನಾ, ಡಾ. ಶ್ರೀನಿವಾಸ ಹಾವನೂರ ಅವರಿಗೆ ಗೌ॥ ಡಾಕ್ಟರೇಟ್ ಪದವಿಯಾದ ನಾಡೋಜ ಪ್ರಶಸ್ತಿ ನೀಡಿ ಪುರಸ್ಕರಿಸಿದೆ.

- **ಪಂಪಪ್ರಶಸ್ತಿ :** (೨೦೦೮) ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀಗಳವರಿಗೆ ಈ ಪ್ರತಿಷ್ಠಿತ ಪ್ರಶಸ್ತಿ ಸಂದಿದೆ. ಪ್ರಧಾನ ಸಮಾರಂಭ ೧೭/೧೧/೦೯ರಂದು ಶಿರಸಿಯಲ್ಲಿ ನಡೆಯಿತು. ಮುಖ್ಯಮಂತ್ರಿ ಯಡ್ಯೂರಪ್ಪ ಪ್ರಶಸ್ತಿ ವಿತರಿಸಿದರು.

- **೭೫ನೇ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷತೆ (೨೦೦೯):** ನಾಡೋಜ ಡಾ. ಎಲ್. ಬಸವರಾಜು ಅವರು ಚಿತ್ರದುರ್ಗದಲ್ಲಿ ನಡೆದ ಪ್ರತಿಷ್ಠಿತ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಫೆಬ್ರವರಿ ೦೪, ೦೫, ೦೬, ೦೭, ೨೦೦೯ರಂದು ಈ ಅದ್ದೂರಿ ಸಮ್ಮೇಳನ ನಡೆಯಿತು.

- **'ಪದ್ಮಶ್ರೀ' ಪ್ರಶಸ್ತಿ:** ಕೇಂದ್ರ ಸರ್ಕಾರವು ಈ ಸಾಲಿನಲ್ಲಿ ಕನ್ನಡದ ಶ್ರೀ ಬನ್ನಂಜೆ ಗೋವಿಂದಚಾರ್ಯ; ಶ್ರೀಮತ್ತೂರು ಕೃಷ್ಣಮೂರ್ತಿ, ಶ್ರೀಮತಿ ಶಶಿ ದೇಶಪಾಂಡೆ ಅವರಿಗೆ ಈ ಮಹತ್ವದ ಗೌರವವನ್ನು ನೀಡಿ ಪುರಸ್ಕರಿಸಿದೆ.

- **'ಸಿದ್ಧಗಂಗಾ ಶ್ರೀ' ಪ್ರಶಸ್ತಿ:** ಸಿದ್ಧಗಂಗಾ ಮಠದಲ್ಲಿ ನಡೆದ ಡಾ. ಶಿವಕುಮಾರಸ್ವಾಮೀಜಿ ಅವರ ಜನ್ಮ ಶತಮಾನೋತ್ಸವ ಆಚರಣೆ ಸಂದರ್ಭದಲ್ಲಿ ಸ್ಥಾಪಿಸಿರುವ ಪ್ರಥಮ ಸಿದ್ಧಗಂಗಾಶ್ರೀ ಪ್ರಶಸ್ತಿಯನ್ನು ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪ ಅವರಿಗೆ ನೀಡಿ ಪುರಸ್ಕರಿಸಲಾಯಿತು. ನಿಧಿಯನ್ನು (೧ ಲಕ್ಷ) ಡಾ. ಜಿ.ಎಸ್.ಎಸ್ ಅವರು ಕೃತಜ್ಞತಾಪೂರ್ವಕವಾಗಿ ಮಠದ ನಿತ್ಯ ದಾಸೋಹ ನಿಧಿಗೆ ಅರ್ಪಿಸಿದರು. (೦೪-೦೨-೦೯)

- **ಡಾ. ಜಿಎಸ್ಸೆಸ್ ಪ್ರಶಸ್ತಿ:** ಡಾ. ಜಿಎಸ್ಸೆಸ್ ವಿಶ್ವಸ್ತ ಮಂಡಲಿ ನೀಡುವ ಈ ಪ್ರತಿಷ್ಠಿತ ಪ್ರಶಸ್ತಿ ೨೦೦೮ನೇ ಸಾಲಿಗೆ ಡಾ. ರಹಮತ್ ತರೀಕೆರೆ ಅವರಿಗೆ ಸಂದಿದೆ - (೭-೦೨-೦೯).

- **ಟಿಯೆಸ್ಸಾರ್ ಪ್ರಶಸ್ತಿ :** ಈ ಪ್ರತಿಷ್ಠಿತ ಪತ್ರಿಕಾಪ್ರಶಸ್ತಿಯ ಪ್ರಜಾವಾಣಿಯ ಕಾರ್ಯನಿರ್ವಾಹಕ ಸಂಪಾದಕ ಶ್ರೀ ರಾಜಾಶೈಲೇಂದ್ರ ಗುಪ್ತ; ಅವರಿಗೆ ಸಂದಿದೆ. ಇದರೊಂದಿಗೆ ಅಭಿವೃದ್ಧಿ ಪತ್ರಿಕೋದ್ಯಮ ಪ್ರಶಸ್ತಿ ಶ್ರೀ ಶಿವರಾಮಅಸುಂಡಿ; ಪರಿಸರ ಪತ್ರಿಕೋದ್ಯಮ ಪ್ರಶಸ್ತಿ ಶ್ರೀ ಶಿವಾನಂದ ಕಳವೆ ಹಾಗೂ ಸುಮಂಗಲಾ ಎಸ್. ಮಮ್ಮಿಗಟ್ಟಿ ಅವರಿಗೆ ನೀಡಲಾಗಿದೆ.

ಮೇಲ್ಕಂಡ ಎಲ್ಲಾ ಸನ್ಮಾನ್ಯರುಗಳಿಗೆ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಹಾರ್ದಿಕ ಅಭಿನಂದನೆಯೊಡನೆ ಶುಭಾಶಯ ಕೋರುತ್ತದೆ.

ಶ್ರದ್ಧಾಂಜಲಿ

ಜಾನಪದ ಹಾಗೂ ಯಕ್ಷಗಾನ ಅಕಾಡೆಮಿಯ ಮಾಜಿ ಅಧ್ಯಕ್ಷ **ಶ್ರೀ ಕೆರೆಮನೆ ಶಂಬು ಹೆಗಡೆ** ಹೃದಯಾಘಾತದಿಂದ ತಾ॥ ೩-೨-೦೯ ನಿಧನರಾದರು (ಇಡಗುಂಜಿಯಲ್ಲಿ ಜಾತ್ರೆಯ ನಿಮಿತ್ತ ತಾ॥ ೨-೨-೦೯ ರಂದು ಏರ್ಪಡಿಸಿದ್ದ ಲವಕುಶ ಕಾಳಗ ಯಕ್ಷಗಾನ ಪ್ರಸಂಗದಲ್ಲಿ ರಾಮನ ಪಾತ್ರವಹಿಸಿ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದರು) ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನವು ಶ್ರೀಯುತರ ಅಪೂರ್ವ ಕೊಡುಗೆಗಳನ್ನು ಅಭಿಮಾನಪೂರ್ವಕ ವಾಗಿ ಸ್ಮರಿಸುತ್ತಾ ಅವರಿಗೆ ಗೌರವಪೂರ್ವಕ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದೆ.

ತೆರೆದ-ಅಂಚೆ

ಅಚ್ಚಾದ ಪುಸ್ತಕ

ಶ್ರೀಮತಿ/ಶ್ರೀ..

....

....

ವಿಳಾಸ
ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
ಬಿ.ಎಂ.ಶ್ರೀ. ಕಲಾಭವನ, ೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ
ಬೆಂಗಳೂರು - ೧೯
ದೂರವಾಣಿ : ೨೬೬೧೫೮೭೭

ಮುದ್ರಕರು : ಇಳಾ ಮುದ್ರಣ, ನಂ. ೩೬, ೪೦ ಅಡಿ ರಸ್ತೆ, ರಾಘವನಗರ, ನ್ಯೂ ಟಿಂಬರ್‌ಯಾರ್ಡ್ ಲೇಔಟ್, ಬೆಂಗಳೂರು - ೨೬. ✆ : ೨೬೭೫೭೧೫೯
'ವಾರ್ತಾಪತ್ರ' ಪ್ರಾಯೋಜಕರು: ಇಳಾ ಮುದ್ರಣ, ಬೆಂಗಳೂರು-೨೬